# ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ ಅಧಿನಿಯಮ, 1952

(1952ರ ಅಧಿನಿಯಮ ಸಂಖ್ಯೆ 30)

**[02-11-2004 ರ ಭಾರತ ರಾಜಪತ್ರದ IXನೇ ಭಾಗದ, 1 ನೇ ವಿಭಾಗದ, 30 ನೇ ಸಂಪುಟದ 1ನೇ ಸಂಖ್ಯೆಯ ವಿಶೇಷ ಸಂಚಿಕೆಯಲ್ಲಿ 42 ರಿಂದ 52 ರ ವರೆಗಿನ ಪುಟಗಳಲ್ಲಿ ಪ್ರಕಟಿತ]**

**ವಿಷಯಾನುಕ್ರಮಣಿಕೆ**

**ಪ್ರಕರಣಗಳು:**


1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ
2. ಪರಿಭಾಷೆಗಳು
3. ಸ್ಥಿರಸ್ವತ್ತಿನ ಕಡ್ಡಾಯ ಕೋರಿಕೆಗೆ ಅಧಿಕಾರ
4. ಕಡ್ಡಾಯವಾಗಿ ಕೋರಲಾದ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರ
5. ಕಡ್ಡಾಯವಾಗಿ ಕೋರಲಾಗಿರುವ ಸ್ವತ್ತಿನ ಮೇಲಿರುವ ಹಕ್ಕುಗಳು
6. ಕಡ್ಡಾಯ ಕೋರಿಕೆಯಿಂದ ಬಿಡುಗಡೆ
7. ಕಡ್ಡಾಯವಾಗಿ ಕೋರಲಾದ ಸ್ವತ್ತಿನ ಆರ್ಜನೆಗೆ ಅಧಿಕಾರ
8. ಪರಿಹಾರವನ್ನು ನಿರ್ಧರಿಸುವ ಸೂತ್ರಗಳು ಮತ್ತು ವಿಧಾನ
9. ಪರಿಹಾರದ ಸಂದಾಯ
10. ಕಡ್ಡಾಯ ಕೋರಿಕೆಯ ಆದೇಶಗಳ ಮೇಲೆ ಅಪೀಲುಗಳು
11. ನಷ್ಟ ಪರಿಹಾರದ ಸಂಬಂಧದಲ್ಲಿನ ಐತೀರ್ಪುಗಳ ಮೇಲೆ ಅಪೀಲುಗಳು
12. ಸಕ್ಷಮ ಪ್ರಾಧಿಕಾರವು ಮತ್ತು ಮಧ್ಯಸ್ಥಗಾರನು ಸಿವಿಲ್ ನ್ಯಾಯಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕದ್ದು
13. ಮಾಹಿತಿ ಪಡೆಯಲು ಅಧಿಕಾರ
14. ಪ್ರವೇಶಿಸಲು ಮತ್ತು ಪರಿಶೀಲಿಸಲು ಅಧಿಕಾರ
15. ನೋಟೀಸುಗಳ ಮತ್ತು ಆದೇಶಗಳ ಜಾರಿ
16. ಅನುಭೋಗದ ಹಕ್ಕಿಗೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ
17. ಅಧಿಕಾರಗಳ ಪ್ರತ್ಯಾಯೋಜನೆ
18. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ
19. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ
20. ಅಪರಾಧಗಳ ಬಗ್ಗೆ ದಂಡ
21. ಕೆಲವು ವ್ಯಕ್ತಿಗಳು ಲೋಕನೌಕರರಾಗಿರತಕ್ಕದ್ದು

22. ನಿಯಮ ರಚನಾಧಿಕಾರ

23. ಕೆಲವು ಕಡ್ಡಾಯ ಕೋರಿಕೆಗಳ ಮತ್ತು ಆರ್ಜನೆಗಳ ಸಿಂಧುತ್ವ

24. ನಿರಸನ ಮತ್ತು ಉಳಿಸುವಿಕೆ

25. ಅಧಿನಿಯಮದ ಮೇರೆಗೆ ಕೆಲವು ಕಡ್ಡಾಯ ಕೋರಿಕೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ

26. ಅಧಿನಿಯಮದ ಮೇರೆಗೆ ಕೆಲವು ಕಡ್ಡಾಯ ಕೋರಿಕೆಗಳಿಗೆ ವಿಶೇಷ ಉಪಬಂಧ

# ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ ಅಧಿನಿಯಮ, 1952

(1952ರ ಅಧಿನಿಯಮ ಸಂಖ್ಯೆ 30)

[14ನೇ ಮಾರ್ಚ್, 1952]

ಒಕ್ಕೂಟದ ಉದ್ದೇಶಗಳಿಗಾಗಿ ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆಗಾಗಿ ಮತ್ತು ಅದರ ಆರ್ಜನೆಗಾಗಿ ಉಪಬಂಧಿಸುವ ಅಧಿನಿಯಮ.

ಸಂಸತ್ತಿನಿಂದ ಈ ಕೆಳಕಂಡಂತೆ ಅಧಿನಿಯಮಿತವಾಗತಕ್ಕದ್ದು:-

**1. ಸಂಕ್ಷಿಪ್ತ ಹೆಸರು ಮತ್ತು ವ್ಯಾಪ್ತಿ.-** (1) ಈ ಅಧಿನಿಯಮವನ್ನು ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ ಅಧಿನಿಯಮ, 1952 ಎಂದು ಕರೆಯತಕ್ಕದ್ದು.

(2) ಇದು, ಜಮ್ಮು ಮತ್ತು ಕಾಶ್ಮೀರ ರಾಜ್ಯವನ್ನು ಹೊರತುಪಡಿಸಿ ಇಡೀ ಭಾರತಕ್ಕೆ ವ್ಯಾಪ್ತವಾಗುತ್ತದೆ.

**2. ಪರಿಭಾಷೆಗಳು.-** ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,-

(ಎ) "ಐತೀರ್ಪು" ಎಂದರೆ 8ನೇ ಪ್ರಕರಣದ ಮೇರೆಗೆ ಮಧ್ಯಸ್ಥಗಾರನು ಕೊಟ್ಟಿರುವ ಯಾವುದೇ ಐತೀರ್ಪು;

(ಬಿ) "ಸಕ್ಷಮ ಪ್ರಾಧಿಕಾರ" ಎಂದರೆ ಕೇಂದ್ರ ಸರ್ಕಾರವು ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಲ್ಲಿ, ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರದ ಪ್ರಕಾರ್ಯಗಳನ್ನು ನೆರವೇರಿಸಲು ಅಧಿಕೃತಗೊಳಿಸಿದ ಯಾರೇ ವ್ಯಕ್ತಿ ಅಥವಾ ಪ್ರಾಧಿಕಾರ;

(ಸಿ) "ಭೂ ಮಾಲೀಕ" ಎಂದರೆ ತನಗಾಗಿ ಆಗಲಿ ಅಥವಾ ಇತರ ಯಾರೇ ವ್ಯಕ್ತಿಗಾಗಿ ಅಥವಾ ಅವನ ಪರವಾಗಿ ಅಥವಾ ಅವನ ಪ್ರಯೋಜನಕ್ಕಾಗಿ ಆಗಲಿ ಅಥವಾ ಇತರ ಯಾರೇ ವ್ಯಕ್ತಿಯ ನ್ಯಾಸಧಾರಿಯಾಗಿ, ಸಂರಕ್ಷಕನಾಗಿ ಅಥವಾ ರಿಸೀವರ್ ಆಗಿ ಅಥವಾ ಆವರಣಗಳನ್ನು ಗೇಣಿದಾರನಿಗೆ ಬಾಡಿಗೆಗೆ ಕೊಟ್ಟಿದ್ದ ಪಕ್ಷದಲ್ಲಿ, ಬಾಡಿಗೆಯನ್ನು ಹಾಗೆ ಪಡೆಯುವವನಾಗಿ ಅಥವಾ ಪಡೆಯಲು ಹಕ್ಕುಳ್ಳವನಾಗಿ ತತ್ಕಾಲದಲ್ಲಿ ಯಾವುದೇ ಆವರಣಗಳ ಬಾಡಿಗೆಯನ್ನು ಪಡೆಯುತ್ತಿರುವ ಅಥವಾ ಪಡೆಯಲು ಹಕ್ಕುಳ್ಳವನಾಗಿರುವ ಯಾರೇ ವ್ಯಕ್ತಿ;

(ಡಿ) ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ "ಹಿತಾಸಕ್ತಿಯುಳ್ಳ ವ್ಯಕ್ತಿ" ಎಂಬ ಪದಾವಳಿಯು, ಈ ಅಧಿನಿಯಮದ ಮೇರೆಗೆ ಆ ಸ್ವತ್ತನ್ನು ಕಡ್ಡಾಯವಾಗಿ ಕೋರುವ ಅಥವಾ ಆರ್ಜನೆ ಮಾಡುವ ಕಾರಣಕ್ಕಾಗಿ ಸಂದಾಯ ಮಾಡಬೇಕಾದ ಪರಿಹಾರ ಧನದಲ್ಲಿ ಹಿತಾಸಕ್ತಿಯನ್ನು ಕ್ಲೇಮು ಮಾಡುತ್ತಿರುವ ಅಥವಾ ಕ್ಲೇಮು ಮಾಡಲು ಹಕ್ಕುಳ್ಳ ಎಲ್ಲ ವ್ಯಕ್ತಿಗಳನ್ನೂ ಒಳಗೊಳ್ಳುತ್ತದೆ;

(ಇ) "ಆವರಣಗಳು" ಎಂದರೆ ಯಾವುದೇ ಕಟ್ಟಡ ಅಥವಾ ಕಟ್ಟಡದ ಭಾಗ ಮತ್ತು ಇದರಲ್ಲಿ-

(i) ಅಂಥ ಕಟ್ಟಡಕ್ಕೆ ಅಥವಾ ಕಟ್ಟಡದ ಭಾಗಕ್ಕೆ ಸೇರಿದ ತೋಟ, ಮೈದಾನಗಳು ಮತ್ತು ಹೊರ ಮನೆಗಳು ಯಾವುವಾದರೂ ಇದ್ದರೆ, ಅವುಗಳನ್ನು;

(ii) ಅಂಥ ಕಟ್ಟಡದಿಂದ ಅಥವಾ ಕಟ್ಟಡದ ಭಾಗದಿಂದ ಹೆಚ್ಚು ಪ್ರಯೋಜನಕಾರಿ ಅನುಭೋಗಕ್ಕಾಗಿ, ಆ ಕಟ್ಟಡಕ್ಕೆ ಅಥವಾ ಅದರ ಭಾಗಕ್ಕೆ ಸೇರಿಸಲಾದ ಯಾವುವೇ ಜೋಡಣೆಗಳನ್ನು

– ಒಳಗೊಳ್ಳುತ್ತದೆ;

(ಎಫ್) "ನಿಯಮಿಸಲಾದುದು" ಎಂದರೆ ಈ ಅಧಿನಿಯಮದ ಮೇರೆಗೆ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು;

(ಜಿ) "ಸ್ವತ್ತು" ಎಂದರೆ ಪ್ರತಿಯೊಂದು ರೀತಿಯ ಸ್ಥಿರ ಸ್ವತ್ತು ಮತ್ತು ಇದು ಅಂಥ ಸ್ವತ್ತಿನಲ್ಲಿನ ಅಥವಾ ಸ್ವತ್ತಿನ ಮೇಲಿನ ಯಾವುವೇ ಹಕ್ಕುಗಳನ್ನು ಒಳಗೊಳ್ಳುತ್ತದೆ;

(ಹೆಚ್) "ಗೇಣಿದಾರ" ಎಂದರೆ ಯಾವ ವ್ಯಕ್ತಿಯು ಅಥವಾ ಯಾವ ವ್ಯಕ್ತಿಯ ಪರವಾಗಿ ಯಾವುವೇ ಆವರಣಗಳಿಗಾಗಿ ಬಾಡಿಗೆ ಸಂದಾಯ ಮಾಡಬೇಕಾಗಿದೆಯೋ ಆ ಯಾರೇ ವ್ಯಕ್ತಿ ಮತ್ತು ಇದು ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಮೇರೆಗೆ ಗೇಣಿದಾರನ ಮೂಲಕ ಹಕ್ಕು ಪಡೆದಂಥ ಉಪಗೇಣಿದಾರನನ್ನು ಮತ್ತು ಇತರ ವ್ಯಕ್ತಿಗಳನ್ನು ಒಳಗೊಳ್ಳುತ್ತದೆ.

**3. ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆಗೆ ಅಧಿಕಾರ.**– (1) ಒಕ್ಕೂಟದ ಉದ್ದೇಶವಾಗಿರುವ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ಯಾವುದೇ ಸ್ವತ್ತಿನ ಅಗತ್ಯವಿದೆಯೆಂದು ಅಥವಾ ಅಗತ್ಯವಿರುವ ಸಂಭವವಿದೆಯೆಂದು ಮತ್ತು ಆ ಸ್ವತ್ತನ್ನು ಕಡ್ಡಾಯವಾಗಿ ಕೋರಬೇಕೆಂದು ಸಕ್ಷಮ ಪ್ರಾಧಿಕಾರವು ಅಭಿಪ್ರಾಯಪಡುವಲ್ಲಿ, ಸಕ್ಷಮ ಪ್ರಾಧಿಕಾರವು,–

(ಎ) ಸ್ವತ್ತಿನ ಸ್ವಾಧೀನವನ್ನು ಹೊಂದಿರಬಹುದಾದ ಮಾಲೀಕನಿಗೆ ಅಥವಾ ಇತರ ಯಾರೇ ವ್ಯಕ್ತಿಗೆ, ಲಿಖಿತ ನೋಟೀಸನ್ನು ಜಾರಿ ಮಾಡಿ, ಹಾಗೆ ಜಾರಿ ಮಾಡಿದ ದಿನಾಂಕದಿಂದ ಹದಿನೈದು ದಿನಗಳೊಳಗಾಗಿ ಸ್ವತ್ತನ್ನು ಏಕೆ ಕಡ್ಡಾಯವಾಗಿ ಕೋರಬಾರದೆಂಬುದಕ್ಕೆ ಕಾರಣವನ್ನು ತೋರಿಸುವಂತೆ (ಅಂಥ ನೋಟೀಸಿನಲ್ಲಿ ಕಡ್ಡಾಯ ಕೋರಿಕೆಯ ಉದ್ದೇಶಗಳನ್ನು ನಿರ್ದಿಷ್ಟಪಡಿಸಿ) ಕೋರತಕ್ಕದ್ದು; ಮತ್ತು

(ಬಿ) ಆದೇಶವನ್ನು ಹೊರಡಿಸಿ, ಆ ಆದೇಶದಲ್ಲಿ ನಿರ್ದಿಷ್ಟಪಡಿಸಬಹುದಾದಂತೆ ಎರಡು ತಿಂಗಳಿಗೆ ಮೀರದ ಅವಧಿಯಲ್ಲಿ ಸಕ್ಷಮ ಪ್ರಾಧಿಕಾರದ ಅನುಮತಿಯಿಲ್ಲದೆ ಸ್ವತ್ತಿನ ಮಾಲೀಕನಾಗಲಿ ಅಥವಾ ಇತರ ಯಾರೇ ವ್ಯಕ್ತಿಯಾಗಲಿ ಸ್ವತ್ತನ್ನು ವಿಲೆ ಮಾಡಬಾರದೆಂದು ಅಥವಾ ಅದರ ರಚನೆಯಲ್ಲಿ ಪರಿವರ್ತನೆ ಮಾಡಬಾರದೆಂದು ಅಥವಾ ಅದನ್ನು ಗೇಣಿದಾರನಿಗೆ ಬಾಡಿಗೆಗೆ ಕೊಡಬಾರದೆಂದು ನಿರ್ದೇಶಿಸಬಹುದು.

(2) ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಅಥವಾ ಅದರ ಸ್ವಾಧೀನದಲ್ಲಿರುವ ಯಾರೇ ವ್ಯಕ್ತಿಯು ತೋರಿಸಿರುವ ಕಾರಣ ಯಾವುದಾದರೂ ಇದ್ದರೆ, ಅದನ್ನು ಪರಿಶೀಲಿಸಿದ ತರುವಾಯ ಸ್ವತ್ತನ್ನು ಕಡ್ಡಾಯವಾಗಿ ಕೋರುವುದು ಅವಶ್ಯವಾಗಿದೆಯೆಂದು ಅಥವಾ ಯುಕ್ತವಾಗಿದೆಯೆಂದು ಸಕ್ಷಮ ಪ್ರಾಧಿಕಾರವು ಅಭಿಪ್ರಾಯಪಟ್ಟರೆ, ಅದು ಲಿಖಿತದಲ್ಲಿ ಆದೇಶದ ಮೂಲಕ ಹಾಗೆ ಕಡ್ಡಾಯವಾಗಿ ಕೋರಬಹುದು ಮತ್ತು ಕಡ್ಡಾಯ ಕೋರಿಕೆಗೆ ಸಂಬಂಧಪಟ್ಟಂತೆ ಅವಶ್ಯವೆಂದು ಅಥವಾ ಯುಕ್ತವೆಂದು ತನಗೆ ಕಂಡುಬರುವಂತೆ ಹೆಚ್ಚಿನ ಆದೇಶಗಳನ್ನು ಮಾಡಬಹುದು:

ಪರಂತು, ಯಾವುದೇ ಸ್ವತ್ತನ್ನು ಅಥವಾ ಅದರ ಭಾಗವನ್ನು,–

(ಎ) ಅದರ ಒಡೆಯನು ತನ್ನ ಅಥವಾ ತನ್ನ ಕುಟುಂಬದ ವಾಸಸ್ಥಳವನ್ನಾಗಿ ನಿಜವಾಗಿ ಬಳಸಿಕೊಂಡಿದ್ದಾರೆ; ಅಥವಾ

(ಬಿ) ಅದನ್ನು ಸಂಪೂರ್ಣವಾಗಿ ಸಾರ್ವಜನಿಕರ ಧಾರ್ಮಿಕ ಪೂಜೆಗಾಗಿಯಾಗಲಿ ಅಥವಾ ಶಾಲೆ, ಆಸ್ಪತ್ರೆ, ಸಾರ್ವಜನಿಕ ಗ್ರಂಥಾಲಯ ಅಥವಾ ಅನಾಥಾಲಯವನ್ನಾಗಿಯಾಗಲಿ ಅಥವಾ ಅಂಥ ಪೂಜಾ ಸ್ಥಳ ಅಥವಾ ಅಂಥ ಶಾಲೆ, ಆಸ್ಪತ್ರೆ, ಗ್ರಂಥಾಲಯ ಅಥವಾ ಅನಾಥಾಲಯದ ವ್ಯವಸ್ಥಾಪನೆಗೆ ಸಂಬಂಧಪಟ್ಟ ವ್ಯಕ್ತಿಗಳ ವಸತಿಯ ಉದ್ದೇಶಕ್ಕಾಗಿಯಾಗಲಿ ಮಾತ್ರವೇ ಬಳಸಿಕೊಂಡಿರುವಾಗ

– ಕಡ್ಡಾಯವಾಗಿ ಕೋರತಕ್ಕದ್ದಲ್ಲ:

ಮತ್ತೂ ಪರಂತು, ಕಡ್ಡಾಯವಾಗಿ ಕೋರಲಾಗಿರುವ ಸ್ವತ್ತಿನಲ್ಲಿ, (1)ನೇ ಉಪಪ್ರಕರಣದ ಮೇರೆಗೆ ನೋಟೀಸು ಜಾರಿ ಮಾಡಿದ ದಿನಾಂಕದಿಂದ ನಿಕಟಪೂರ್ವದ ಎರಡು ತಿಂಗಳಿಗೆ ಕಡಿಮೆಯಿಲ್ಲದ ಅವಧಿಯಲ್ಲಿ ಗೇಣಿದಾರನು ವಾಸಸ್ಥಳವನ್ನಾಗಿ ಬಳಸುತ್ತಿರುವ ಆವರಣಗಳು ಇದ್ದರೆ, ಸಕ್ಷಮ ಪ್ರಾಧಿಕಾರವು ತಾನು ಯೋಗ್ಯವೆಂದು ಅಭಿಪ್ರಾಯಪಡುವ ಬದಲಿ ವಸತಿಯನ್ನು ಅಂಥ ಗೇಣಿದಾರನಿಗೆ ಒದಗಿಸತಕ್ಕದ್ದು.

**4. ಕಡ್ಡಾಯವಾಗಿ ಕೋರಲಾದ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಳ್ಳುವ ಅಧಿಕಾರ.**– (1) 3ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿರುವಾಗ, ಸಕ್ಷಮ ಪ್ರಾಧಿಕಾರವು, ಲಿಖಿತದಲ್ಲಿ ನೋಟೀಸಿನ ಮೂಲಕ, ಒಡೆಯನಿಗೆ ಮತ್ತು ಸ್ವತ್ತಿನ ಸ್ವಾಧೀನದಲ್ಲಿರಬಹುದಾದ ಇತರ ಯಾರೇ ವ್ಯಕ್ತಿಗೆ ನೋಟೀಸನ್ನು ಜಾರಿ ಮಾಡಿದ ಮೂವತ್ತು ದಿನಗಳೊಳಗೆ, ಸಕ್ಷಮ ಪ್ರಾಧಿಕಾರಕ್ಕೆ ಅಥವಾ ಅದು ಆ ಸಂಬಂಧದಲ್ಲಿ ಯುಕ್ತವಾಗಿ ಅಧಿಕೃತಗೊಳಿಸಿದ ಯಾರೇ ವ್ಯಕ್ತಿಗೆ, ಅದರ ಸ್ವಾಧೀನವನ್ನು ಬಿಟ್ಟುಕೊಡುವಂತೆ ಅಥವಾ ಒಪ್ಪಿಸುವಂತೆ ಆದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಮಾಡಿದ ಆದೇಶವನ್ನು ಪಾಲಿಸಲು ಯಾರೇ ವ್ಯಕ್ತಿಯು ನಿರಾಕರಿಸಿದಲ್ಲಿ ಅಥವಾ ತಪ್ಪಿದಲ್ಲಿ, ಸಕ್ಷಮ ಪ್ರಾಧಿಕಾರವು ಸ್ವತ್ತಿನ ಸ್ವಾಧೀನವನ್ನು ತೆಗೆದುಕೊಳ್ಳಬಹುದು ಮತ್ತು ಆ ಉದ್ದೇಶಕ್ಕಾಗಿ ಅವಶ್ಯವಾಗಬಹುದಾದಂಥ ಬಲವನ್ನು ಉಪಯೋಗಿಸಬಹುದು.

**5. ಕಡ್ಡಾಯವಾಗಿ ಕೋರಲಾಗಿರುವ ಸ್ವತ್ತಿನ ಮೇಲಿರುವ ಹಕ್ಕುಗಳು.**– (1) 3ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಎಲ್ಲ ಸ್ವತ್ತನ್ನು ಕಡ್ಡಾಯ ಕೋರಿಕೆಯ ನೋಟೀಸಿನಲ್ಲಿ ನಮೂದಿಸಬಹುದಾದಂಥ ಉದ್ದೇಶಗಳಿಗಾಗಿ ಬಳಸಿಕೊಳ್ಳತಕ್ಕದ್ದು.

(2) 3ನೇ ಪ್ರಕರಣದ ಮೇರೆಗೆ ಯಾವುವೇ ಆವರಣಗಳನ್ನು ಕಡ್ಡಾಯವಾಗಿ ಕೋರಿರುವಲ್ಲಿ, ಸಕ್ಷಮ ಪ್ರಾಧಿಕಾರವು, ಅವಶ್ಯಕವಾಗಬಹುದಾದ ಮತ್ತು ಆ ಪ್ರದೇಶದಲ್ಲಿ ಭೂಮಾಲೀಕರು ಸಾಮಾನ್ಯವಾಗಿ ಮಾಡಬಹುದಾದಂಥ ಮತ್ತು ನೋಟೀಸಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ದುರಸ್ತಿಗಳನ್ನು ಆ ನೋಟೀಸಿನಲ್ಲಿ ನಮೂದಿಸಬಹುದಾದಂಥ ಯುಕ್ತ ಕಾಲದೊಳಗೆ ಮಾಡಬೇಕೆಂದು ಭೂಮಾಲೀಕರಿಗೆ ಆದೇಶಿಸಬಹುದು ಮತ್ತು ಅಂಥ ಆದೇಶಕ್ಕನುಸಾರವಾಗಿ ಯಾವುವೇ ದುರಸ್ತಿಗಳನ್ನು ಮಾಡಲು ಭೂ ಮಾಲೀಕನು ತಪ್ಪಿದಲ್ಲಿ, ಆದೇಶದಲ್ಲಿ ನಿರ್ದಿಷ್ಟಪಡಿಸಿದ ದುರಸ್ತಿಗಳನ್ನು ಭೂಮಾಲೀಕನ ಖರ್ಚಿನಲ್ಲಿಯೇ ಸಕ್ಷಮ ಪ್ರಾಧಿಕಾರವು ಮಾಡಿಸಬಹುದು ಮತ್ತು ತಗುಲಿದ ಖರ್ಚನ್ನು ವಸೂಲಿಯ ಇತರ ಯಾವುದೇ ವಿಧಾನಕ್ಕೆ ಬಾಧಕವಾಗದಂತೆ, ಭೂಮಾಲೀಕನಿಗೆ ಸಂದಾಯ ಮಾಡಲಾಗುವ ಪರಿಹಾರದಿಂದ ಮುರಿದುಕೊಳ್ಳಬಹುದು.

**6. ಕಡ್ಡಾಯ ಕೋರಿಕೆಯಿಂದ ಬಿಡುಗಡೆ.-** (1) ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾದ ಯಾವುದೇ ಸ್ವತ್ತನ್ನು ಯಾವುದೇ ಕಾಲದಲ್ಲಿ ಕೇಂದ್ರ ಸರ್ಕಾರವು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಬಹುದು ಮತ್ತು ಯಥೋಚಿತ ಸವೆತದಿಂದ ಮತ್ತು ತಡೆದುಕೊಳ್ಳಲಾಗದ ಒತ್ತಡದಿಂದ ಆ ಸ್ವತ್ತಿನಲ್ಲಿ ವ್ಯತ್ಯಾಸವುಂಟಾಗಿದ್ದರೂ ಕೂಡ ಸಾಧ್ಯವಾದಷ್ಟುಮಟ್ಟಿಗೆ ಆ ಸ್ವತ್ತನ್ನು ಸ್ವಾಧೀನಕ್ಕೆ ತೆಗೆದುಕೊಂಡಿದ್ದಾಗ ಇದ್ದಂಥದೇ ಸುಸ್ಥಿತಿಯಲ್ಲಿ ಅದನ್ನು ವಾಪಸು ಮಾಡತಕ್ಕದ್ದು:

ಪರಂತು, ಕಡ್ಡಾಯವಾಗಿ ಕೋರಲಾದ ಯಾವುದೇ ಸ್ವತ್ತನ್ನು ಬಳಸುತ್ತಿದ್ದ ಉದ್ದೇಶಗಳು ಪೂರ್ಣಗೊಂಡಲ್ಲಿ, ಸ್ವತ್ತನ್ನು 7ನೇ ಪ್ರಕರಣದ ಮೇರೆಗೆ ಆರ್ಜನೆ ಮಾಡಿಕೊಂಡಿದ್ದ ಹೊರತು, ಕೇಂದ್ರ ಸರ್ಕಾರವು ಆ ಸ್ವತ್ತನ್ನು ಕೂಡಲೇ ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡತಕ್ಕದ್ದು.

(1ಎ) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು,-

(ಎ) ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ (ತಿದ್ದುಪಡಿ) ಅಧಿನಿಯಮ, 1970ರ ಪ್ರಾರಂಭಕ್ಕೆ ಮುಂಚೆ ಅಂಥ ಪ್ರಾರಂಭಗೊಂಡಂದಿನಿಂದ ಹದಿನೇಳು ವರ್ಷಗಳ ಅವಧಿಯು ಮುಕ್ತಾಯಗೊಂಡ ದಿನದಂದು ಅಥವಾ ಅದಕ್ಕೂ ಮುಂಚಿತವಾಗಿ ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾದ ಅಥವಾ ಕಡ್ಡಾಯವಾಗಿ ಕೋರಲಾಗಿದೆಯೆಂದು ಭಾವಿಸಲಾದ ಯಾವುದೇ ಸ್ವತ್ತನ್ನು;

(ಬಿ) ಅಂಥ ಪ್ರಾರಂಭದ ನಂತರ, ಅಂಥ ಸ್ವತ್ತಿನ ಸ್ವಾಧೀನವನ್ನು 4ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟ ಅಥವಾ ಒಪ್ಪಿಸಿದ ಅಥವಾ ಪ್ರಾಧಿಕಾರವು ತೆಗೆದುಕೊಂಡ ದಿನಾಂಕದಿಂದ ಹದಿನೇಳು ವರ್ಷಗಳ ಅವಧಿಯು ಮುಕ್ತಾಯಗೊಂಡ ದಿನದಂದು ಅಥವಾ ಅದಕ್ಕೂ ಮುಂಚಿತವಾಗಿ ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾದ ಯಾವುದೇ ಸ್ವತ್ತನ್ನು, ಮೇಲೆ ಹೇಳಿದ ಹದಿನೇಳು ವರ್ಷಗಳ ಅವಧಿಯ ಒಳಗಾಗಿ 7ನೇ ಪ್ರಕರಣದ ಮೇರೆಗೆ ಆರ್ಜನೆ ಮಾಡಿದ್ದ ಹೊರತು

- ಅಂಥ ಸ್ವತ್ತನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆಗೊಳಿಸತಕ್ಕದ್ದು.

(2) (1)ನೇ ಉಪಪ್ರಕರಣದ ಅಥವಾ (1ಎ) ಉಪಪ್ರಕರಣದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಬೇಕಾಗಿರುವಲ್ಲಿ, ಸಕ್ಷಮ ಪ್ರಾಧಿಕಾರವು ವಿಚಾರಣೆಯನ್ನು ಮಾಡುವುದು ಅಥವಾ ಮಾಡಿಸುವುದು ಯಾವುದೇ ಸಂದರ್ಭದಲ್ಲಿ ಅವಶ್ಯವೆಂದು ಪರಿಗಣಿಸಿದರೆ ಅಂಥ ವಿಚಾರಣೆಯ ತರುವಾಯ ಯಾವ ವ್ಯಕ್ತಿಗೆ ಸ್ವತ್ತಿನ ಸ್ವಾಧೀನವನ್ನು ಕೊಡಬೇಕಾಗಿದೆ ಎಂಬುದನ್ನು ಲಿಖಿತದಲ್ಲಿ ಆದೇಶದ ಮೂಲಕ ನಿರ್ದಿಷ್ಟಪಡಿಸಬಹುದು ಮತ್ತು ಅಂಥ ಸ್ವಾಧೀನವನ್ನು ಕಾರ್ಯಸಾಧ್ಯವಾದಷ್ಟುಮಟ್ಟಿಗೆ, ಕಡ್ಡಾಯ ಕೋರಿಕೆಯ ಕಾಲದಲ್ಲಿ ಯಾರಿಂದ ಸ್ವಾಧೀನವನ್ನು ತೆಗೆದುಕೊಳ್ಳಲಾಗಿತ್ತೋ ಆ ವ್ಯಕ್ತಿಗೆ ಅಥವಾ ಅಂಥ ವ್ಯಕ್ತಿಯ ಹಿತಾಸಕ್ತಿಯಲ್ಲಿನ ಉತ್ತರಾಧಿಕಾರಿಗಳಿಗೆ ಕೊಡತಕ್ಕದ್ದು.

(3) (2)ನೇ ಉಪಪ್ರಕರಣದ ಮೇರೆಗಿನ ಆದೇಶದಲ್ಲಿ ನಿರ್ದಿಷ್ಟಪಡಿಸಲಾಗಿರುವ ವ್ಯಕ್ತಿಗೆ ಸ್ವಾಧೀನವನ್ನು ಒಪ್ಪಿಸಿದರೆ, ಆ ಸ್ವತ್ತಿನ ಸಂಬಂಧಪಟ್ಟ ಎಲ್ಲ ಹೊಣೆಗಾರಿಕೆಗಳಿಂದ ಕೇಂದ್ರ ಸರ್ಕಾರವು ಸಂಪೂರ್ಣವಾಗಿ ಮುಕ್ತವಾಗತಕ್ಕದ್ದು. ಆದರೆ, ಇದು ಯಾರೇ ಇತರ ವ್ಯಕ್ತಿಯು ಆ ಸ್ವತ್ತಿಗೆ ಸಂಬಂಧಪಟ್ಟಂತೆ ಕಾನೂನು ಪ್ರಕ್ರಿಯೆಯ ಮೂಲಕ ಹಕ್ಕುಳ್ಳವನಾಗಬಹುದಾದ ಯಾವುವೇ ಹಕ್ಕುಗಳನ್ನು ಆ ಸ್ವತ್ತಿನ ಸ್ವಾಧೀನವನ್ನು ಯಾರಿಗೆ ಕೊಡಲಾಗಿದೆಯೋ ಆ ವ್ಯಕ್ತಿಯ ವಿರುದ್ಧ ಜಾರಿಗೊಳಿಸಲು ಬಾಧಕವಾಗತಕ್ಕದ್ದಲ್ಲ.

(4) ಕಡ್ಡಾಯವಾಗಿ ಕೋರಲಾದ ಯಾವುದೇ ಸ್ವತ್ತಿನ ಸ್ವಾಧೀನವನ್ನು ಯಾವ ವ್ಯಕ್ತಿಗೆ ಕೊಡಬೇಕಾಗಿದೆಯೋ ಆ ವ್ಯಕ್ತಿಯು ಕಂಡುಬರದಿರುವಾಗ ಮತ್ತು ಅವನ ಪರವಾಗಿ ಅದನ್ನು ಸ್ವೀಕರಿಸಲು ಅಧಿಕೃತ ಏಜೆಂಟನಾಗಲಿ ಅಥವಾ ಇತರ ವ್ಯಕ್ತಿಯಾಗಲಿ ಇಲ್ಲದಿರುವಾಗ, ಸಕ್ಷಮ ಪ್ರಾಧಿಕಾರವು, ಸ್ವತ್ತನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಲಾಗಿದೆಯೆಂದು ಘೋಷಿಸುವ ನೋಟೀಸನ್ನು ಸ್ವತ್ತಿನ ಎದ್ದುಕಾಣುವ ಭಾಗದಲ್ಲಿ ಅಂಟಿಸುವ ವ್ಯವಸ್ಥೆ ಮಾಡತಕ್ಕದ್ದು ಮತ್ತು ಆ ನೋಟೀಸನ್ನು ರಾಜಪತ್ರದಲ್ಲಿಯೂ ಸಹ ಪ್ರಕಟಿಸತಕ್ಕದ್ದು.

(5) (4)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸಿದಾಗ, ಅಂಥ ನೋಟೀಸಿನಲ್ಲಿ ನಿರ್ದಿಷ್ಟಪಡಿಸಿದ ಸ್ವತ್ತು ಅಂಥ ಪ್ರಕಟಣೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಕಡ್ಡಾಯ ಕೋರಿಕೆಗೆ ಒಳಗಾಗಿರುವುದು ನಿಂತುಹೋಗತಕ್ಕದ್ದು ಮತ್ತು ಅದರ ಸ್ವಾಧೀನವನ್ನು ಹಕ್ಕುಳ್ಳ ವ್ಯಕ್ತಿಗೆ ಒಪ್ಪಿಸಲಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಸದರಿ ದಿನಾಂಕದ ತರುವಾಯ ಯಾವುದೇ ಅವಧಿಗೆ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಯಾವುದೇ ಪರಿಹಾರ ನೀಡಲು ಅಥವಾ ಇತರ ಕ್ಲೇಮಿಗೆ ಕೇಂದ್ರ ಸರ್ಕಾರವು ಹೊಣೆಯಾಗಿರತಕ್ಕದ್ದಲ್ಲ.

(6) ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾದ ಯಾವುದೇ ಸ್ವತ್ತು ಅಥವಾ ಅದರ ಯಾವುದೇ ಮುಖ್ಯ ಭಾಗವು ಬೆಂಕಿ, ಭೂಕಂಪ, ಬಿರುಗಾಳಿ, ಪ್ರವಾಹ ಅಥವಾ ಯಾವುದೇ ಸೇನೆಯ ಅಥವಾ ದೊಂಬಿಯ ಹಿಂಸೆ ಅಥವಾ ಇತರ ತಡೆದುಕೊಳ್ಳಲಾಗದ ಒತ್ತಡದಿಂದಾಗಿ ಸಂಪೂರ್ಣವಾಗಿ ನಾಶವಾಗಿದ್ದಲ್ಲಿ ಅಥವಾ ಅದನ್ನು ಯಾವ ಉದ್ದೇಶಕ್ಕಾಗಿ ಕಡ್ಡಾಯವಾಗಿ ಕೋರಲಾಗಿತ್ತೋ ಆ ಉದ್ದೇಶಕ್ಕೆ ಬಹುಮಟ್ಟಿಗೆ ಮತ್ತು ಖಾಯಂ ಆಗಿ ಉಪಯುಕ್ತವಾಗಿರದಿದ್ದಲ್ಲಿ, ಕಡ್ಡಾಯ ಕೋರಿಕೆಯು ಕೇಂದ್ರ ಸರ್ಕಾರದ ಇಚ್ಛಾನುಸಾರವಾಗಿ ಅಸಿಂಧುವಾಗತಕ್ಕದ್ದು:

ಪರಂತು, ಅಂಥ ಸ್ವತ್ತಿಗೆ ಆದ ಹಾನಿಯು ಕೇಂದ್ರ ಸರ್ಕಾರದ ಯಾವುದೇ ದೋಷಪೂರ್ಣ ಕೃತ್ಯದಿಂದ ಅಥವಾ ತಪ್ಪಿನಿಂದ ಉಂಟಾಗಿರುವಲ್ಲಿ, ಈ ಉಪಪ್ರಕರಣದ ಪ್ರಯೋಜನವು ಆ ಸರ್ಕಾರಕ್ಕೆ ದೊರೆಯತಕ್ಕದ್ದಲ್ಲ.

**7. ಕಡ್ಡಾಯವಾಗಿ ಕೋರಲಾದ ಸ್ವತ್ತಿನ ಆರ್ಜನೆಗೆ ಅಧಿಕಾರ.-** (1) ಯಾವುದೇ ಸ್ವತ್ತು ಕಡ್ಡಾಯ ಕೋರಿಕೆಗೆ ಒಳಗಾಗಿರುವಾಗ, ಸಾರ್ವಜನಿಕ ಉದ್ದೇಶಕ್ಕಾಗಿ ಆ ಸ್ವತ್ತನ್ನು ಆರ್ಜಿಸುವುದು ಅವಶ್ಯಕವೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಟ್ಟಲ್ಲಿ, ಈ ಪ್ರಕರಣಕ್ಕನುಸಾರವಾಗಿ ಸ್ವತ್ತನ್ನು ಆರ್ಜನೆ ಮಾಡಿಕೊಳ್ಳಲು ಕೇಂದ್ರ ಸರ್ಕಾರವು ನಿರ್ಧರಿಸಿದೆಯೆಂಬ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ, ಆ ಸರ್ಕಾರವು ಅಂಥ ಸ್ವತ್ತನ್ನು ಯಾವುದೇ ಕಾಲದಲ್ಲಿ ಆರ್ಜನೆ ಮಾಡಿಕೊಳ್ಳಬಹುದು:

ಪರಂತು, ಅಂಥ ನೋಟೀಸನ್ನು ಕೊಡುವುದಕ್ಕೆ ಮುಂಚೆ, ಕೇಂದ್ರ ಸರ್ಕಾರವು ಸ್ವತ್ತನ್ನು ಹಾಗೆ ಏಕೆ ಆರ್ಜನೆ ಮಾಡಿಕೊಳ್ಳಬಾರದು ಎಂಬುದಕ್ಕೆ ಕಾರಣವನ್ನು ತೋರಿಸುವಂತೆ ಅಂಥ ಸ್ವತ್ತಿನ ಒಡೆಯನನ್ನು ಅಥವಾ ಅಂಥ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳವನಾಗಿರಬಹುದೆಂದು ಕೇಂದ್ರ ಸರ್ಕಾರವು ಅಭಿಪ್ರಾಯಪಡುವಂಥ ಇತರ ಯಾರೇ ವ್ಯಕ್ತಿಯನ್ನು ಕೇಳತಕ್ಕದ್ದು; ಮತ್ತು ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು ಯಾವುವೇ ಕಾರಣಗಳನ್ನು ಕೊಟ್ಟಿದ್ದರೆ, ಅವುಗಳನ್ನು ಪರ್ಯಾಲೋಚಿಸಿದ ತರುವಾಯ ಮತ್ತು ಪಕ್ಷಕಾರರಿಗೆ ತಮ್ಮ ಅಹವಾಲನ್ನು ಹೇಳಿಕೊಳ್ಳಲು ಒಂದು ಅವಕಾಶವನ್ನು ಕೊಟ್ಟ ತರುವಾಯ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಮಾಡಬಹುದು.

(2) ಸದರಿ ನೋಟೀಸನ್ನು ರಾಜಪತ್ರದಲ್ಲಿ ಪ್ರಕಟಿಸಿದಾಗ, ಕಡ್ಡಾಯವಾಗಿ ಕೋರಲಾಗಿದ್ದ ಸ್ವತ್ತು, ಹಾಗೆ ನೋಟೀಸನ್ನು ಪ್ರಕಟಿಸಿದ ದಿನದಂದು ಮತ್ತು ಆ ದಿನದ ಪ್ರಾರಂಭದಿಂದ ಎಲ್ಲ ಋಣಭಾರಗಳಿಂದ ಮುಕ್ತವಾಗಿ ಸಂಪೂರ್ಣವಾಗಿ ಕೇಂದ್ರ ಸರ್ಕಾರದಲ್ಲಿ ನಿಹಿತವಾಗತಕ್ಕದ್ದು ಮತ್ತು ಅಂಥ ಸ್ವತ್ತಿನ ಕಡ್ಡಾಯ ಕೋರಿಕೆಯ ಅವಧಿಯು ಕೊನೆಗೊಳ್ಳತಕ್ಕದ್ದು.

(3) ಕೆಳಕಂಡ ಸಂದರ್ಭಗಳ ಹೊರತು, ಈ ಪ್ರಕರಣದ ಮೇರೆಗೆ ಯಾವ ಸ್ವತ್ತನ್ನೂ, ಎಂದರೆ,-

(ಎ) ಯಾವುವೇ ಕಾಮಗಾರಿಗಳನ್ನು, ಕಡ್ಡಾಯ ಕೋರಿಕೆಯ ಕಾಲದಲ್ಲಿ, ಕೇಂದ್ರ ಸರ್ಕಾರದ ವೆಚ್ಚದಲ್ಲಿ, ಪೂರ್ಣವಾಗಿ ಅಥವಾ ಭಾಗಶಃವಾಗಿ ಸ್ವತ್ತಿನ ಮೇಲೆ, ಸ್ವತ್ತಿನಲ್ಲಿ ಅಥವಾ ಸ್ವತ್ತಿನ ಮೇಲುಗಡೆ ಕೈಗೊಂಡಿದ್ದರೆ ಮತ್ತು ಸರ್ಕಾರದ ಉದ್ದೇಶಗಳಿಗಾಗಿ ಅಂಥ ಕಾಮಗಾರಿಗಳ ಮೌಲ್ಯವನ್ನು ಪಡೆಯಬೇಕೆಂದು ಅಥವಾ ಅದನ್ನು ಬಳಸುವ ಹಕ್ಕನ್ನು ಸಂರಕ್ಷಿಸಬೇಕೆಂದು ಸರ್ಕಾರವು ನಿರ್ಧರಿಸಿದ್ದರೆ; ಅಥವಾ

(ಬಿ) ಸ್ವತ್ತನ್ನು ಕಡ್ಡಾಯವಾಗಿ ಕೋರಲಾದ ಕಾಲದಲ್ಲಿದ್ದಂತೆ, ಅದನ್ನು ಮೊದಲಿದ್ದ ಸ್ಥಿತಿಗೆ ತರಲು ಆಗುವ ಖರ್ಚು, ಮಿತಿಮೀರಿದ ಖರ್ಚೆಂದು ಕೇಂದ್ರ ಸರ್ಕಾರವು ನಿರ್ಧರಿಸಿದರೆ, ಮತ್ತು ಸ್ವತ್ತನ್ನು ಹಾಗೆ ಮೊದಲಿದ್ದ ಸ್ಥಿತಿಗೆ ತರುವುದಕ್ಕಾಗಿ ಪರಿಹಾರವನ್ನು ಸಂದಾಯ ಮಾಡದೆ ಸ್ವತ್ತನ್ನು ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡುವುದನ್ನು ಒಡೆಯನು ಒಪ್ಪಿಕೊಳ್ಳಲು ನಿರಾಕರಿಸಿದರೆ

- ಆರ್ಜನೆ ಮಾಡಿಕೊಳ್ಳತಕ್ಕದ್ದಲ್ಲ.

(4) (3)ನೇ ಉಪಪ್ರಕರಣದ ಮೇರೆಗಿನ ಕೇಂದ್ರ ಸರ್ಕಾರದ ಯಾವುದೇ ತೀರ್ಮಾನ ಅಥವಾ ನಿರ್ಧಾರವು ಅಂತಿಮವಾಗಿರತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದಲ್ಲಿ ಅದನ್ನು ಪ್ರಶ್ನಿಸತಕ್ಕದ್ದಲ್ಲ.

(5) (3)ನೇ ಉಪಪ್ರಕರಣದ (ಎ) ಖಂಡದ ಉದ್ದೇಶಗಳಿಗಾಗಿ "ಕಾಮಗಾರಿ" ಎಂಬುದು ಕಟ್ಟಡಗಳನ್ನು, ರಚನೆಗಳನ್ನು ಮತ್ತು ಪ್ರತಿಯೊಂದು ವಿವರಣೆಯ ಸುಧಾರಣೆಗಳನ್ನು ಒಳಗೊಳ್ಳುತ್ತದೆ.

**8. ಪರಿಹಾರವನ್ನು ನಿರ್ಧರಿಸುವ ಸೂತ್ರಗಳು ಮತ್ತು ವಿಧಾನ.-** (1) ಈ ಅಧಿನಿಯಮದ ಮೇರೆಗೆ ಯಾವುದೇ ಸ್ವತ್ತನ್ನು ಕಡ್ಡಾಯವಾಗಿ ಕೋರಿದಾಗ ಅಥವಾ ಆರ್ಜನೆ ಮಾಡಿದಾಗ, ಈ ಮುಂದೆ ನಿರ್ಧರಿಸಿದ ರೀತಿಯಲ್ಲಿ ಮತ್ತು ಸೂತ್ರಗಳಿಗನುಸಾರವಾಗಿ ನಿರ್ಧರಿಸಲಾದ ಮೊಬಲಗನ್ನು ಪರಿಹಾರವಾಗಿ ಸಂದಾಯ ಮಾಡತಕ್ಕದ್ದು, ಎಂದರೆ,-

(ಎ) ಪರಿಹಾರದ ಮೊಬಲಗನ್ನು ಒಪ್ಪಂದದ ಮೂಲಕ ನಿಗದಿಪಡಿಸುವುದಾದರೆ, ಅದನ್ನು ಅಂಥ ಒಪ್ಪಂದಕ್ಕನುಸಾರ ಸಂದಾಯ ಮಾಡತಕ್ಕದ್ದು;

(ಬಿ) ಅಂಥ ಯಾವುದೇ ಒಪ್ಪಂದಕ್ಕೆ ಬರಲಾಗದಿದ್ದರೆ, ಉಚ್ಚ ನ್ಯಾಯಾಲಯದ ನ್ಯಾಯಾಧೀಶನಾಗಿರುವ ಅಥವಾ ಆಗಿದ್ದ ಅಥವಾ ನ್ಯಾಯಾಧೀಶನಾಗಿ ನೇಮಕ ಹೊಂದಲು ಅರ್ಹತೆ ಹೊಂದಿರುವ ವ್ಯಕ್ತಿಯನ್ನು ಮಧ್ಯಸ್ಥಗಾರನನ್ನಾಗಿ ಕೇಂದ್ರ ಸರ್ಕಾರವು ನೇಮಕ ಮಾಡತಕ್ಕದ್ದು;

(ಸಿ) ಕಡ್ಡಾಯವಾಗಿ ಕೋರಲಾದ ಅಥವಾ ಆರ್ಜಿಸಲಾದ ಸ್ವತ್ತಿನ ಸ್ವರೂಪದ ಬಗ್ಗೆ ತುಂಬಾ ತಿಳಿವಳಿಕೆಯುಳ್ಳ ವ್ಯಕ್ತಿಯನ್ನು ಯಾವುದೇ ವಿಶಿಷ್ಟ ಸಂದರ್ಭದಲ್ಲಿ

ಮಧ್ಯಸ್ಥಗಾರನಿಗೆ ಸಹಾಯ ಮಾಡುವುದಕ್ಕಾಗಿ ಕೇಂದ್ರ ಸರ್ಕಾರವು ನಾಮನಿರ್ದೇಶನ ಮಾಡಬಹುದು ಮತ್ತು ಹಾಗೆ ನಾಮನಿರ್ದೇಶನವನ್ನು ಮಾಡಿದರೆ, ನಷ್ಟಪರಿಹಾರವನ್ನು ಪಡೆಯಬೇಕಾಗಿರುವ ವ್ಯಕ್ತಿಯು ಸಹ ಅದೇ ಉದ್ದೇಶಕ್ಕಾಗಿ ಒಬ್ಬ ನಿರ್ಧಾರಕನನ್ನು ನಾಮನಿರ್ದೇಶಿಸಬಹುದು;

(ಡಿ) ಮಧ್ಯಸ್ಥಗಾರನ ಮುಂದೆ ವ್ಯವಹರಣೆಗಳನ್ನು ಪ್ರಾರಂಭಿಸುವಾಗ, ಕೇಂದ್ರ ಸರ್ಕಾರ ಮತ್ತು ಪರಿಹಾರವನ್ನು ಪಡೆಯಬೇಕಾಗಿರುವ ವ್ಯಕ್ತಿಯು ತಮ್ಮ ತಮ್ಮ ಅಭಿಪ್ರಾಯಗಳ ಪ್ರಕಾರ ಪರಿಹಾರದ ಸರಿಯಾದ ಮೊಬಲಗು ಯಾವುದೆಂಬುದನ್ನು ಸೂಚಿಸತಕ್ಕದ್ದು;

(ಇ) ಮಧ್ಯಸ್ಥಗಾರನು ವಿವಾದವನ್ನು ಸುನಾವಣೆ ಮಾಡಿದ ತರುವಾಯ, ತನಗೆ ನ್ಯಾಯವೆಂದು ಕಂಡುಬರುವ ಪರಿಹಾರದ ಮೊಬಲಗನ್ನು ನಿರ್ಧರಿಸುವ ಮತ್ತು ಅಂಥ ನಷ್ಟಪರಿಹಾರವನ್ನು ಯಾವ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಂದಾಯ ಮಾಡಬೇಕೆಂಬುದನ್ನು ನಿರ್ದಿಷ್ಟಪಡಿಸುವ ಐತೀರ್ಪನ್ನು ಹೊರಡಿಸತಕ್ಕದ್ದು ಮತ್ತು ಆ ಐತೀರ್ಪನ್ನು ಹೊರಡಿಸುವಾಗ ಅವನು ಪ್ರತಿಯೊಂದು ಪ್ರಕರಣದ ಸನ್ನಿವೇಶಗಳಿಗೆ ಮತ್ತು (2) ಮತ್ತು (3)ನೇ ಉಪಪ್ರಕರಣಗಳ ಉಪಬಂಧಗಳಿಗೆ, ಅವು ಅನ್ವಯವಾಗುವಷ್ಟರಮಟ್ಟಿಗೆ ಗಮನ ಕೊಡತಕ್ಕದ್ದು;

(ಎಫ್) ಪರಿಹಾರಕ್ಕೆ ಹಕ್ಕುಳ್ಳ ವ್ಯಕ್ತಿಯ ಅಥವಾ ವ್ಯಕ್ತಿಗಳ ಬಗ್ಗೆ ಯಾವುದೇ ವಿವಾದವಿರುವಾಗ, ಅಂಥ ವಿವಾದವನ್ನು ಮಧ್ಯಸ್ಥಗಾರನು ತೀರ್ಮಾನಿಸತಕ್ಕದ್ದು ಮತ್ತು ನಷ್ಟಪರಿಹಾರವನ್ನು ಪಡೆಯಲು ಒಬ್ಬನಿಗಿಂತ ಹೆಚ್ಚು ವ್ಯಕ್ತಿಗಳು ಹಕ್ಕುಳ್ಳವರಾಗಿದ್ದಾರೆಂದು ಮಧ್ಯಸ್ಥಗಾರನಿಗೆ ಕಂಡುಬಂದರೆ, ಅಂಥ ವ್ಯಕ್ತಿಗಳಿಗೆ ಅದರ ಮೊಬಲಗನ್ನು ಅವನು ಹಂಚತಕ್ಕದ್ದು;

(ಜಿ) ಮಧ್ಯಸ್ಥಿಕೆ ನಿರ್ಣಯ ಅಧಿನಿಯಮ, 1940 (1940ರ 10) ರಲ್ಲಿ ಇರುವುದು ಯಾವುದೂ ಈ ಪ್ರಕರಣದ ಮೇರೆಗಿನ ಮಧ್ಯಸ್ಥ ನಿರ್ಣಯಗಳಿಗೆ ಅನ್ವಯಿಸತಕ್ಕದ್ದಲ್ಲ.

(2) ಯಾವುದೇ ಸ್ವತ್ತಿನ ಕಡ್ಡಾಯ ಕೋರಿಕೆಗಾಗಿ ಸಂದಾಯ ಮಾಡಬಹುದಾದ ಪರಿಹಾರದ ಮೊಬಲಗು, (2ಎ) ಮತ್ತು (2ಬಿ) ಉಪಪ್ರಕರಣಗಳ ಉಪಬಂಧಗಳಿಗೊಳಪಟ್ಟು,-

(ಎ) ಕಡ್ಡಾಯ ಕೋರಿಕೆಯ ಅವಧಿಗೆ ಸಂಬಂಧಪಟ್ಟಂತೆ, ಆ ಸ್ವತ್ತನ್ನು ಅಂಥ ಅವಧಿಯಲ್ಲಿ ಗೇಣಿಗೆ ತೆಗೆದುಕೊಂಡಿದ್ದಿದ್ದರೆ, ಅದರ ಬಳಕೆ ಮತ್ತು ಅನುಭೋಗಕ್ಕಾಗಿ ಸಂದಾಯ ಮಾಡಬಹುದಾಗಿದ್ದಂಥ ಬಾಡಿಗೆಗೆ ಸಮನಾದ ಮೊಬಲಗಿನಷ್ಟು ಆವರ್ತಕ ಸಂದಾಯವನ್ನು; ಮತ್ತು

(ಬಿ) ಈ ಕೆಳಕಂಡ ಎಲ್ಲಾ ಅಥವಾ ಯಾವುದೇ ವಿಷಯಗಳ ಬಗ್ಗೆ ಹಿತಾಸಕ್ತಿಯುಳ್ಳ ವ್ಯಕ್ತಿಗೆ ನಷ್ಟಪರಿಹಾರವನ್ನು ನೀಡಲು ಅವಶ್ಯಕವೆಂದು ಕಂಡುಬರ ಬಹುದಾದಂಥ ಮೊಬಲಗು ಅಥವಾ ಮೊಬಲಗುಗಳು, ಯಾವುವಾದರೂ ಇದ್ದರೆ, ಎಂದರೆ:-

(i) ಕಡ್ಡಾಯ ಕೋರಿಕೆಯಿಂದ ಉಂಟಾದ ಆರ್ಥಿಕ ನಷ್ಟ;

(ii) ಕಡ್ಡಾಯವಾಗಿ ಕೋರಲಾದ ಆವರಣಗಳನ್ನು ಖಾಲಿ ಮಾಡುವ ಸಲುವಾಗಿ ಮಾಡಿದ ವೆಚ್ಚಗಳು;

(iii) ಕಡ್ಡಾಯ ಕೋರಿಕೆಯಿಂದ ಬಿಡುಗಡೆ ಮಾಡಿದ ಆವರಣಗಳನ್ನು ಪುನಃ ಸ್ವಾಧೀನಕ್ಕೆ ತೆಗೆದುಕೊಳ್ಳುವ ಸಲುವಾಗಿ ಮಾಡಿದ ವೆಚ್ಚಗಳು; ಮತ್ತು

(iv) ಕಡ್ಡಾಯ ಕೋರಿಕೆಯ ಸಮಯದಲ್ಲಿದ್ದಂತೆ ಆ ಸ್ವತ್ತನ್ನು ಮೊದಲಿದ್ದ ಸ್ಥಿತಿಗೆ ತರುವುದಕ್ಕಾಗಿ ತಗಲಬಹುದಾದ ವೆಚ್ಚಗಳನ್ನು ಒಳಗೊಂಡು, ಕಡ್ಡಾಯ ಕೋರಿಕೆಯ ಅವಧಿಯಲ್ಲಿ ಸ್ವತ್ತಿಗೆ ಉಂಟಾದ (ಸಹಜವಾಗಿ ಆಗಿರುವ ಸವೆತವನ್ನು ಬಿಟ್ಟು ಇತರೆ) ನಷ್ಟಗಳು

– ಇವುಗಳನ್ನು ಒಳಗೊಂಡಿರತಕ್ಕದ್ದು.

(2ಎ) ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ (2)ನೇ ಉಪಪ್ರಕರಣದ (ಎ) ಖಂಡದಲ್ಲಿ ಉಲ್ಲೇಖಿಸಲಾಗಿರುವ ಆವರ್ತಕ ಸಂದಾಯವನ್ನು, 6ನೇ ಪ್ರಕರಣದ ಮೇರೆಗೆ ಸ್ವತ್ತನ್ನು ಕಡ್ಡಾಯ ಕೋರಿಕೆಯಿಂದ ಬೇಗನೆ ಬಿಡುಗಡೆ ಮಾಡಿದ್ದ ಹೊರತು ಅಥವಾ 7ನೇ ಪ್ರಕರಣದ ಮೇರೆಗೆ ಆರ್ಜಿಸಿದ್ದ ಹೊರತು,–

(ಎ) ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆ ಮತ್ತು ಆರ್ಜನೆ (ತಿದ್ದುಪಡಿ) ಅಧಿನಿಯಮ, 1975 ಇದು ಪ್ರಾರಂಭಗೊಂಡ ನಿಕಟಪೂರ್ವದ ಐದು ವರ್ಷಗಳ ಅವಧಿಯವರೆಗೆ ಅಥವಾ ಇನ್ನೂ ದೀರ್ಘ ಕಾಲದವರೆಗೆ ಈ ಅಧಿನಿಯಮದ ಮೇರೆಗೆ ಕಡ್ಡಾಯ ಕೋರಿಕೆಗೆ ಅಂಥ ಸ್ವತ್ತು ಒಳಪಟ್ಟಿರುವ ಸಂದರ್ಭದಲ್ಲಿ,–

(i) ಮೊದಲನೆಯದಾಗಿ ಅಂಥ ಪ್ರಾರಂಭದ ದಿನಾಂಕದಿಂದ ಜಾರಿಗೆ ಬರುವಂತೆ; ಮತ್ತು

(ii) ಎರಡನೆಯದಾಗಿ, ಅಂಥ ಪ್ರಾರಂಭದ ನಂತರ ಐದು ವರ್ಷಗಳು ಮುಕ್ತಾಯಗೊಂಡ ದಿನದಿಂದ ಜಾರಿಗೆ ಬರುವಂತೆ ಮತ್ತು ಮೂರನೆಯದಾಗಿ ಅಂಥ ಪ್ರಾರಂಭದ ನಂತರ ಹತ್ತು ವರ್ಷಗಳು ಮುಕ್ತಾಯಗೊಂಡ ದಿನದಿಂದ ಜಾರಿಗೆ ಬರುವಂತೆ;

(ಬಿ) ಅಂಥ ಸ್ವತ್ತು, ಅಂಥ ಪ್ರಾರಂಭದ ನಿಕಟಪೂರ್ವದ ಐದು ವರ್ಷಗಳಿಗಿಂತ ಕಡಿಮೆ ಅವಧಿಗೆ ಈ ಅಧಿನಿಯಮದ ಮೇರೆಗೆ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವ ಮತ್ತು ಅಂಥ ಸ್ವತ್ತು ಅಂಥ ಪ್ರಾರಂಭದ ದಿನದಿಂದ, 6ನೇ ಪ್ರಕರಣದ (1ಎ) ಉಪಪ್ರಕರಣದ ಉಪಬಂಧಗಳ ಅನುಸಾರವಾಗಿ ಕಡ್ಡಾಯ ಕೋರಿಕೆಯಿಂದ ಬಿಡುಗಡೆಗೊಳಿಸತಕ್ಕ ಅಥವಾ ಆರ್ಜಿಸತಕ್ಕ ಗರಿಷ್ಠ ಅವಧಿಯು ಐದು ವರ್ಷಗಳಿಗೂ ಮೀರಿರುವ ಸಂದರ್ಭದಲ್ಲಿ,–

(i) ಮೊದಲನೆಯದಾಗಿ, ಅಂಥ ಸ್ವತ್ತಿನ ಸ್ವಾಧೀನವನ್ನು 4ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟ ಅಥವಾ ಅದರ ವಶಕ್ಕೊಪ್ಪಿಸಿದ ಅಥವಾ ಪ್ರಾಧಿಕಾರವು ವಶಪಡಿಸಿಕೊಂಡ ದಿನಾಂಕದಿಂದ ಜಾರಿಗೆ ಬರುವಂತೆ; ಮತ್ತು

(ii) ಎರಡನೆಯದಾಗಿ, (i)ನೇ ಉಪಖಂಡದ ಮೇರೆಗೆ ಮಾಡಿದ ಪರಿಷ್ಕರಣೆಯು ಜಾರಿಗೆ ಬರುವ ದಿನಾಂಕದಿಂದ ಹತ್ತು ವರ್ಷಗಳು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ;

(ಸಿ) ಇತರೆ ಯಾವುದೇ ಸಂದರ್ಭದಲ್ಲಿ,–

(i) ಮೊದಲು ಅಂಥ ಸ್ವತ್ತಿನ ಸ್ವಾಧೀನವನ್ನು, 4ನೇ ಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರಕ್ಕೆ ಬಿಟ್ಟುಕೊಟ್ಟ ಅಥವಾ ಅದರ ವಶಕ್ಕೊಪ್ಪಿಸಿದ ಅಥವಾ ಪ್ರಾಧಿಕಾರವು ವಶಪಡಿಸಿಕೊಂಡ ದಿನಾಂಕದಿಂದ ಐದು ವರ್ಷಗಳು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ; ಮತ್ತು

(ii) ಎರಡನೆಯದಾಗಿ, (i)ನೇ ಉಪಖಂಡದ ಮೇರೆಗೆ ಮಾಡಿದ ಪರಿಷ್ಕರಣೆಯು ಜಾರಿಗೆ ಬರುವ ದಿನಾಂಕದಿಂದ ಐದು ವರ್ಷಗಳು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ ಮತ್ತು ಮೂರನೆಯದಾಗಿ ಹತ್ತು ವರ್ಷಗಳು ಮುಕ್ತಾಯಗೊಂಡ ದಿನಾಂಕದಿಂದ ಜಾರಿಗೆ ಬರುವಂತೆ

– (2ಬಿ) ಉಪಪ್ರಕರಣದ ಉಪಬಂಧಗಳಿಗೆ ಅನುಸಾರವಾಗಿ ಪರಿಷ್ಕರಿಸತಕ್ಕದ್ದು.

(2ಬಿ) ಯಾವುದೇ ಸ್ವತ್ತಿಗೆ ಸಂಬಂಧಿಸಿದಂತೆ ಆವರ್ತಕ ಸಂದಾಯವನ್ನು, ಅಂಥ ಸ್ವತ್ತನ್ನು (2ಎ) ಉಪಪ್ರಕರಣದ ಮೇರೆಗೆ ಯಾವ ದಿನಾಂಕದಿಂದ ಪರಿಣಾಮಕಾರಿಯಾಗುವಂತೆ ಪರಿಷ್ಕರಣೆ ಮಾಡಬೇಕಾಗಿದೆಯೋ ಅಂಥ ದಿನಾಂಕದಂದು ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಿದ್ದರೆ ಹೇಗೋ ಹಾಗೆ (2)ನೇ ಉಪಪ್ರಕರಣದ (ಎ) ಖಂಡದೊಂದಿಗೆ ಓದಿಕೊಂಡ (1)ನೇ ಉಪಪ್ರಕರಣದಲ್ಲಿ ತಿಳಿಸಿರುವ ರೀತಿಯಲ್ಲಿ ಮತ್ತು ತತ್ವಗಳ ಅನುಸಾರವಾಗಿ ಅಂಥ ಸಂದಾಯವನ್ನು ಪುನರ್ ನಿರ್ಧರಿಸುವ ಮೂಲಕ ಪರಿಷ್ಕರಿಸತಕ್ಕದ್ದು.

(3) 7ನೇ ಪ್ರಕರಣದ ಮೇರೆಗೆ ಯಾವುದೇ ಸ್ವತ್ತಿನ ಆರ್ಜನೆಗಾಗಿ ಸಂದಾಯ ಮಾಡತಕ್ಕ ಪರಿಹಾರವು, ಕಡ್ಡಾಯ ಕೋರಿಕೆಯ ಕಾಲದಲ್ಲಿದ್ದಂತಹ ಸ್ಥಿತಿಯಲ್ಲಿಯೇ ಆ ಸ್ವತ್ತು ಉಳಿದಿದ್ದರೆ ಮತ್ತು ಆರ್ಜನೆ ಮಾಡಿಕೊಂಡ ದಿನಾಂಕದಂದು ಅದು ಮಾರಾಟವಾಗಿದ್ದಿದ್ದರೆ, ಮುಕ್ತ ಮಾರುಕಟ್ಟೆಯಲ್ಲಿ ಕಡ್ಡಾಯವಾಗಿ ಕೋರಲಾದ ಸ್ವತ್ತಿಗೆ ಸಿಗಬಹುದಾಗಿದ್ದಂಥ ಬೆಲೆ ಆಗಿರತಕ್ಕದ್ದು.

**9. ಪರಿಹಾರದ ಸಂದಾಯ.–** ಒಂದು ಐತೀರ್ಪಿನ ಮೇರೆಗೆ ಸಂದಾಯ ಮಾಡಲಾಗುವ ಪರಿಹಾರದ ಮೊಬಲಗನ್ನು, ಈ ಅಧಿನಿಯಮದ ಮೇರೆಗೆ ರಚಿಸಲಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಐತೀರ್ಪಿನಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಕಾಲದೊಳಗೆ ಮತ್ತು ಅಂಥ ವಿಧಾನದಲ್ಲಿ ಅದಕ್ಕೆ ಹಕ್ಕುಳ್ಳ ವ್ಯಕ್ತಿಗೆ ಅಥವಾ ವ್ಯಕ್ತಿಗಳಿಗೆ ಸಕ್ಷಮ ಪ್ರಾಧಿಕಾರವು ಸಂದಾಯ ಮಾಡತಕ್ಕದ್ದು.

**10. ಕಡ್ಡಾಯ ಕೋರಿಕೆಯ ಆದೇಶಗಳ ಮೇಲೆ ಅಪೀಲುಗಳು.–** (1) 3ನೇ ಪ್ರಕರಣದ (2)ನೇ ಉಪಪ್ರಕರಣದ ಮೇರೆಗೆ ಸಕ್ಷಮ ಪ್ರಾಧಿಕಾರವು ಮಾಡಿದ ಕಡ್ಡಾಯ ಕೋರಿಕೆಯ ಆದೇಶದಿಂದ ಬಾಧಿತನಾದ ಯಾರೇ ವ್ಯಕ್ತಿಯು, ಆದೇಶವನ್ನು ಜಾರಿ ಮಾಡಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಕೇಂದ್ರ ಸರ್ಕಾರಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ಕೇಂದ್ರ ಸರ್ಕಾರಕ್ಕೆ ಮನದಟ್ಟಾದರೆ, ಅದು ಸದರಿ ಇಪ್ಪತ್ತೊಂದು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ ಅಪೀಲನ್ನು ಪುರಸ್ಕರಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸ್ವೀಕರಿಸಿದ ಮೇಲೆ ಸಕ್ಷಮ ಪ್ರಾಧಿಕಾರದಿಂದ ವರದಿಯನ್ನು ಕೋರಿದ ಮತ್ತು ಪಕ್ಷಕಾರರಿಗೆ ತಮ್ಮ ಅಹವಾಲು ಹೇಳಿಕೊಳ್ಳಲು ಅವಕಾಶ ನೀಡಿದ ತರುವಾಯ ಮತ್ತು ಅವಶ್ಯಕವಿರಬಹುದಾದಂಥ ಹೆಚ್ಚಿನ ವಿಚಾರಣೆ

ಯಾವುದಾದರೂ ಇದ್ದರೆ, ಅದನ್ನು ನಡೆಸಿದ ತರುವಾಯ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಆದೇಶಗಳನ್ನು ಹೊರಡಿಸಬಹುದು ಮತ್ತು ಕೇಂದ್ರ ಸರ್ಕಾರದ ಆದೇಶವು ಅಂತಿಮವಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಮೇರೆಗೆ ಅಪೀಲನ್ನು ಸಲ್ಲಿಸಿರುವಾಗ, ಕೇಂದ್ರ ಸರ್ಕಾರವು ತಾನು ಸೂಕ್ತವೆಂದು ಭಾವಿಸುವಂಥ ಅವಧಿಯವರೆಗೆ ಮತ್ತು ಅಂಥ ಷರತ್ತುಗಳ ಮೇಲೆ, ಸಕ್ಷಮ ಪ್ರಾಧಿಕಾರದ ಆದೇಶದ ಜಾರಿಯನ್ನು ತಡೆಹಿಡಿಯಬಹುದು.

**11. ನಷ್ಟಪರಿಹಾರದ ಸಂಬಂಧದಲ್ಲಿನ ಐತೀರ್ಪುಗಳ ಮೇಲೆ ಅಪೀಲುಗಳು.**- 8ನೇ ಪ್ರಕರಣದ ಮೇರೆಗೆ ಮಾಡಿದ ಮಧ್ಯಸ್ಥಗಾರನ ಐತೀರ್ಪಿನಿಂದ ಬಾಧಿತನಾದ ಯಾರೇ ವ್ಯಕ್ತಿಯು, ಅಂಥ ಐತೀರ್ಪನ್ನು ನೀಡಿದ ದಿನಾಂಕದಿಂದ ಮೂವತ್ತು ದಿನಗಳೊಳಗೆ, ಕಡ್ಡಾಯವಾಗಿ ಕೋರಲಾದ ಅಥವಾ ಆರ್ಜಿಸಲಾದ ಸ್ವತ್ತು ಯಾವ ಉಚ್ಚ ನ್ಯಾಯಾಲಯದ ಅಧಿಕಾರ ವ್ಯಾಪ್ತಿಯೊಳಗೆ ಇದೆಯೋ ಆ ಉಚ್ಚ ನ್ಯಾಯಾಲಯಕ್ಕೆ ಅಪೀಲು ಸಲ್ಲಿಸಬಹುದು:

ಪರಂತು, ಅಪೀಲುದಾರನು ಸಕಾಲದಲ್ಲಿ ಅಪೀಲನ್ನು ಸಲ್ಲಿಸಲು ಸಾಕಷ್ಟು ಕಾರಣಗಳಿಂದ ಪ್ರತಿಬಂಧಿತನಾಗಿದ್ದನೆಂದು ನ್ಯಾಯಾಲಯಕ್ಕೆ ಮನದಟ್ಟಾದರೆ, ಅದು ಸದರಿ ಮೂವತ್ತು ದಿನಗಳ ಅವಧಿಯು ಮುಕ್ತಾಯವಾದ ತರುವಾಯವೂ, ಅಪೀಲನ್ನು ಪುರಸ್ಕರಿಸಬಹುದು.

**12. ಸಕ್ಷಮ ಪ್ರಾಧಿಕಾರವು ಮತ್ತು ಮಧ್ಯಸ್ಥಗಾರನು ಸಿವಿಲ್ ನ್ಯಾಯಾಲಯದ ಕೆಲವು ಅಧಿಕಾರಗಳನ್ನು ಹೊಂದಿರತಕ್ಕದ್ದು.**- ಸಕ್ಷಮ ಪ್ರಾಧಿಕಾರವು ಮತ್ತು 8ನೇ ಪ್ರಕರಣದ ಮೇರೆಗೆ ನೇಮಕಗೊಂಡ ಮಧ್ಯಸ್ಥಗಾರನು, ಸಂದರ್ಭಾನುಸಾರ, ವಿಚಾರಣೆಯನ್ನು ಅಥವಾ ಈ ಅಧಿನಿಯಮದ ಮೇರೆಗೆ ಮಧ್ಯಸ್ಥಿಕೆ ವ್ಯವಹರಣೆಗಳನ್ನು ನಡೆಸುತ್ತಿರುವಾಗ, ಈ ಮುಂದಿನ ವಿಷಯಗಳ ಬಗ್ಗೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೇರೆಗೆ, ದಾವೆಯ ವಿಚಾರಣೆ ನಡೆಸುತ್ತಿರುವಾಗ ಸಿವಿಲ್ ನ್ಯಾಯಾಲಯದ ಎಲ್ಲಾ ಅಧಿಕಾರಗಳನ್ನು ಹೊಂದಿರತಕ್ಕದ್ದು, ಎಂದರೆ:-

(ಎ) ಯಾರೇ ವ್ಯಕ್ತಿಗೆ ಸಮನು ಮಾಡುವುದು ಮತ್ತು ಅವನ ಹಾಜರಾತಿಯನ್ನು ಒತ್ತಾಯಪಡಿಸುವುದು ಮತ್ತು ಪ್ರಮಾಣವಚನ ಮಾಡಿಸಿ ಅವನನ್ನು ಪರೀಕ್ಷಿಸುವುದು;

(ಬಿ) ಯಾವುದೇ ದಸ್ತಾವೇಜನ್ನು ಹುಡುಕಿಸುವಂತೆ ಮತ್ತು ಹಾಜರುಪಡಿಸುವಂತೆ ಅಗತ್ಯಪಡಿಸುವುದು;

(ಸಿ) ಅಫಿಡವಿಟ್‌ಗಳ ಮೇಲೆ ಸಾಕ್ಷ್ಯವನ್ನು ಪಡೆಯುವುದು;

(ಡಿ) ಯಾವುದೇ ನ್ಯಾಯಾಲಯದಿಂದ ಅಥವಾ ಕಚೇರಿಯಿಂದ ಯಾವುದೇ ಸಾರ್ವಜನಿಕ ದಾಖಲೆಯನ್ನು ಕಡ್ಡಾಯವಾಗಿ ಕೋರುವುದು;

(ಇ) ಸಾಕ್ಷಿಗಳ ಪರೀಕ್ಷೆಗಾಗಿ ಕಮೀಷನ್ನುಗಳನ್ನು ಹೊರಡಿಸುವುದು.

**13. ಮಾಹಿತಿ ಪಡೆಯಲು ಅಧಿಕಾರ.**- 3ನೇ ಪ್ರಕರಣದ ಅಥವಾ 6ನೇ ಪ್ರಕರಣದ ಅಥವಾ 7ನೇ ಪ್ರಕರಣದ ಅಥವಾ 8ನೇ ಪ್ರಕರಣದ ಉದ್ದೇಶಗಳನ್ನು ಈಡೇರಿಸುವ ದೃಷ್ಟಿಯಿಂದ, ಕೇಂದ್ರ ಸರ್ಕಾರವು ಅಥವಾ ಸಕ್ಷಮ ಪ್ರಾಧಿಕಾರವು, ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಿರುವ ಅಥವಾ ಆರ್ಜಿಸಿರುವ ಅಥವಾ ಕಡ್ಡಾಯವಾಗಿ ಕೋರಬೇಕೆಂದು ಅಥವಾ ಆರ್ಜಿಸಬೇಕೆಂದು ಉದ್ದೇಶಿಸಿರುವ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ನಿರ್ದಿಷ್ಟಪಡಿಸಬಹುದಾದಂತೆ, ಯಾರೇ ವ್ಯಕ್ತಿಯ ಬಳಿಯಿರುವ ಮಾಹಿತಿಯನ್ನು, ಆದೇಶದಲ್ಲಿ

ನಿರ್ದಿಷ್ಟಪಡಿಸಬಹುದಾದಂಥ ಅಧಿಕಾರಿಗೆ ಒದಗಿಸುವಂತೆ ಆ ಯಾರೇ ವ್ಯಕ್ತಿಯನ್ನು ಆದೇಶದ ಮೂಲಕ ಅಗತ್ಯಪಡಿಸಬಹುದು.

**14. ಪ್ರವೇಶಿಸಲು ಮತ್ತು ಪರಿಶೀಲಿಸಲು ಅಧಿಕಾರ.-** ಸಕ್ಷಮ ಪ್ರಾಧಿಕಾರವು ಅಥವಾ ಅಂಥ ಪ್ರಾಧಿಕಾರದಿಂದ ಈ ಸಂಬಂಧದಲ್ಲಿ ಸಾಮಾನ್ಯ ಅಥವಾ ವಿಶೇಷ ಆದೇಶದ ಮೂಲಕ ಅಧಿಕಾರ ಪಡೆದ ಯಾರೇ ಅಧಿಕಾರಿಯು, ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಒಂದು ಆದೇಶವನ್ನು ಮಾಡಬೇಕೇ ಮತ್ತು ಮಾಡಬೇಕಾದಲ್ಲಿ ಯಾವ ರೀತಿಯಲ್ಲಿ ಮಾಡಬೇಕು ಎಂಬುದನ್ನು ನಿರ್ಧರಿಸುವ ಉದ್ದೇಶಗಳಿಗಾಗಿ ಅಥವಾ ಈ ಅಧಿನಿಯಮದ ಮೇರೆಗೆ ಹೊರಡಿಸಿದ ಆದೇಶದ ಪಾಲನೆಯನ್ನು ಸುನಿಶ್ಚಿತಗೊಳಿಸಿಕೊಳ್ಳುವ ದೃಷ್ಟಿಯಿಂದ ಯಾವುದೇ ಸ್ವತ್ತನ್ನು ಪ್ರವೇಶಿಸಬಹುದು ಮತ್ತು ಪರಿಶೀಲಿಸಬಹುದು.

**15. ನೋಟೀಸುಗಳ ಮತ್ತು ಆದೇಶಗಳ ಜಾರಿ.-** (1) ಈ ಪ್ರಕರಣದ ಉಪಬಂಧಗಳಿಗೆ ಮತ್ತು ಈ ಅಧಿನಿಯಮದ ಮೇರೆಗೆ ರಚಿಸಬಹುದಾದ ಯಾವುವೇ ನಿಯಮಗಳಿಗೆ ಒಳಪಟ್ಟು, ಈ ಅಧಿನಿಯಮದ ಮೇರೆಗೆ ಹೊರಡಿಸಿದ ಅಥವಾ ಮಾಡಿದ ಪ್ರತಿಯೊಂದು ನೋಟೀಸನ್ನು ಅಥವಾ ಆದೇಶವನ್ನು,-

(ಎ) ಆ ಯಾವುದೇ ನೋಟೀಸು ಅಥವಾ ಆದೇಶವು ಸಾಮಾನ್ಯ ಸ್ವರೂಪದ್ದಾಗಿದ್ದರೆ ಅಥವಾ ಒಂದು ವರ್ಗದ ವ್ಯಕ್ತಿಗಳನ್ನು ಬಾಧಿಸುವಂತಿದ್ದರೆ, ಅದನ್ನು ರಾಜಪತ್ರದಲ್ಲಿ ಪ್ರಕಟಿಸತಕ್ಕದ್ದು; ಮತ್ತು

(ಬಿ) ಆ ಯಾವುದೇ ನೋಟೀಸು ಅಥವಾ ಆದೇಶವು ಒಬ್ಬ ವ್ಯಕ್ತಿಯನ್ನು, ನಿಗಮವನ್ನು ಅಥವಾ ಫರ್ಮನ್ನು ಬಾಧಿಸುವಂತಿದ್ದರೆ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (1908ರ 5)ರ ಮೊದಲನೇ ಅನುಸೂಚಿಯಲ್ಲಿ ಸಂದರ್ಭಾನುಸಾರ, XXIXನೇ ಆದೇಶದ 2ನೇ ನಿಯಮದಲ್ಲಿ ಅಥವಾ XXXನೇ ಆದೇಶದ 3ನೇ ನಿಯಮದಲ್ಲಿ ಸಮನುಗಳ ಜಾರಿಯ ಬಗ್ಗೆ ಉಪಬಂಧಿಸಿದ ರೀತಿಯಲ್ಲಿ ಅದನ್ನು ಜಾರಿ ಮಾಡತಕ್ಕದ್ದು; ಮತ್ತು

(ಸಿ) ಆ ಯಾವುದೇ ನೋಟೀಸು ಅಥವಾ ಆದೇಶವು (ನಿಗಮ ಅಥವಾ ಫರ್ಮ್ ಅಲ್ಲದ) ಒಬ್ಬ ವ್ಯಕ್ತಿಯನ್ನು ಬಾಧಿಸುವಂತಿದ್ದರೆ,-

(i) ಅದನ್ನು ಅಂಥ ವ್ಯಕ್ತಿಗೆ ತಲುಪಿಸುವ ಅಥವಾ ಕೊಡುವ ಮೂಲಕ; ಅಥವಾ

(ii) ಅದನ್ನು ಹಾಗೆ ತಲುಪಿಸಲಾಗದಿದ್ದರೆ ಅಥವಾ ಕೊಡಲಾಗದಿದ್ದರೆ, ಅಂಥ ವ್ಯಕ್ತಿಯ ಕುಟುಂಬದ ಯಾರೇ ವಯಸ್ಕ ಪುರುಷ ಸದಸ್ಯನಿಗೆ ಅದನ್ನು ತಲುಪಿಸುವ ಅಥವಾ ಕೊಡುವ ಮೂಲಕ ಅಥವಾ ಆ ವ್ಯಕ್ತಿಯು ಕೊನೆಯದಾಗಿ ವಾಸಿಸಿದ್ದನೆಂದು ಅಥವಾ ಅವನ ವ್ಯವಹಾರವನ್ನು ನಡೆಸಿದ್ದನೆಂದು ಅಥವಾ ಲಾಭಕ್ಕಾಗಿ ಖುದ್ದಾಗಿ ಕೆಲಸ ಮಾಡಿದ್ದನೆಂದು ತಿಳಿದುಬಂದ ಆವರಣಗಳ ಹೊರ ಬಾಗಿಲಿನ ಮೇಲೆ ಅಥವಾ ಅದರ ಕೆಲವು ಎದ್ದುಕಾಣುವ ಭಾಗದಲ್ಲಿ ಅದರ ಪ್ರತಿಯನ್ನು ಅಂಟಿಸುವುದರ ಮೂಲಕ; ಅಥವಾ

(iii) ಈ ಸಾಧನಗಳ ಮೂಲಕ ಜಾರಿ ಮಾಡಲಾಗದಿದ್ದಲ್ಲಿ, ಅಂಚೆಯ ಮೂಲಕ

- ಜಾರಿ ಮಾಡತಕ್ಕದ್ದು.

(2) ಸ್ವತ್ತಿನ ಒಡೆತನವು ವಿವಾದದಲ್ಲಿರುವಾಗ ಅಥವಾ ಸ್ವತ್ತಿನ ಬಗ್ಗೆ ಹಿತಾಸಕ್ತಿಯುಳ್ಳ ವ್ಯಕ್ತಿಗಳನ್ನು ಕೂಡಲೇ ಪತ್ತೆಹಚ್ಚಲಾಗದಿರುವಾಗ ಮತ್ತು ಹೆಚ್ಚು ವಿಳಂಬವಿಲ್ಲದೆ ನೋಟೀಸು ಅಥವಾ ಆದೇಶವನ್ನು ಜಾರಿ ಮಾಡಲಾಗದಿರುವಾಗ, ನೋಟೀಸು ಅಥವಾ ಆದೇಶವನ್ನು ರಾಜಪತ್ರದಲ್ಲಿ ಪ್ರಕಟಿಸುವ ಮೂಲಕ ಮತ್ತು ಸಾಧ್ಯವಾದಲ್ಲಿ, ಅದು ಯಾವ ಸ್ವತ್ತಿಗೆ ಸಂಬಂಧಿಸುತ್ತದೆಯೋ ಆ ಸ್ವತ್ತಿನ ಯಾವುದೇ ಎದ್ದುಕಾಣುವ ಭಾಗದಲ್ಲಿ ಅದರ ಪ್ರತಿಯನ್ನು ಅಂಟಿಸುವ ಮೂಲಕ, ಅದನ್ನು ಜಾರಿ ಮಾಡಬಹುದು.

**16. ಅನುಭೋಗದ ಹಕ್ಕಿಗೆ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ.-** ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾದ ಅಥವಾ ಆರ್ಜಿಸಿದ ಯಾವುದೇ ಸ್ವತ್ತಿನಲ್ಲಿ ಹಿತಾಸಕ್ತಿಯುಳ್ಳ ಯಾರೇ ವ್ಯಕ್ತಿಯು, ಸಕ್ಷಮ ಪ್ರಾಧಿಕಾರದ ಲಿಖಿತ ಸಮ್ಮತಿಯನ್ನು ಮುಂಚಿತವಾಗಿ ಅಥವಾ ದುರಸ್ತಿಗಳನ್ನು ಮಾಡುವ ಅಥವಾ ಮುನಿಸಿಪಾಲಿಟಿಯ ಅಗತ್ಯತೆಯನ್ನು ಪಾಲಿಸುವ ಉದ್ದೇಶಕ್ಕಾಗಿ ಹೊರತು, ಅಂಥ ಸ್ವತ್ತಿಗೆ ಲಗತ್ತಾದ ಸೌಕರ್ಯಕ್ಕಾಗಲಿ ಅಥವಾ ಅನುಭೋಗದ ಹಕ್ಕಿಗಾಗಲೀ ಉದ್ದೇಶಪೂರ್ವಕವಾಗಿ ಅಡ್ಡಿಯನ್ನುಂಟು ಮಾಡತಕ್ಕದ್ದಲ್ಲ ಅಥವಾ ಅದರ ಖಾಯಂ ಉಪಯೋಗಕ್ಕಾಗಿ ಒದಗಿಸಿದ ಯಾವುದನ್ನೇ ಆಗಲಿ ತೆಗೆದುಹಾಕತಕ್ಕದ್ದಲ್ಲ ಅಥವಾ ಉಪಯೋಗಿಸಲು ಸಾಧ್ಯವಿಲ್ಲದಂತೆ ಮಾಡತಕ್ಕದ್ದಲ್ಲ ಅಥವಾ ಸ್ವತ್ತಿಗೆ ಒದಗಿಸಿದ ಯಾವುದೇ ಸರಬರಾಜನ್ನು ಅಥವಾ ಸೇವೆಯನ್ನು ನಿಲ್ಲಿಸತಕ್ಕದ್ದಲ್ಲ ಅಥವಾ ನಿಲ್ಲಿಸುವಂತೆ ಮಾಡತಕ್ಕದ್ದಲ್ಲ.

**17. ಅಧಿಕಾರಗಳ ಪ್ರತ್ಯಾಯೋಜನೆ.-** (1) ಕೇಂದ್ರ ಸರ್ಕಾರವು, ಈ ಅಧಿನಿಯಮದ ಮೇರೆಗೆ ತಾನು ಚಲಾಯಿಸಬಹುದಾದಂಥ ಅಧಿಕಾರಗಳನ್ನು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಆ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಸನ್ನಿವೇಶಗಳು ಮತ್ತು ಪರಿಸ್ಥಿತಿಗಳು, ಯಾವುವಾದರೂ ಇದ್ದರೆ, ಅಂಥ ಸನ್ನಿವೇಶಗಳಲ್ಲಿ ಮತ್ತು ಪರಿಸ್ಥಿತಿಗಳಲ್ಲಿ, ಕೇಂದ್ರ ಸರ್ಕಾರಕ್ಕೆ ಅಧೀನನಾದ ಅಧಿಕಾರಿಯು ಅಥವಾ ರಾಜ್ಯ ಸರ್ಕಾರವು ಅಥವಾ ರಾಜ್ಯ ಸರ್ಕಾರಕ್ಕೆ ಅಧೀನನಾದ ಅಧಿಕಾರಿಯು ಚಲಾಯಿಸತಕ್ಕದ್ದೆಂದು ನಿರ್ದೇಶಿಸಬಹುದು.

(2) (1)ನೇ ಉಪಪ್ರಕರಣದ ಮೇರೆಗೆ ಹೊರಡಿಸಿದ ಎಲ್ಲಾ ಅಧಿಸೂಚನೆಗಳನ್ನು ಸಾಧ್ಯವಾದಷ್ಟು ಬೇಗನೆ ಸಂಸತ್ತಿನ ಮುಂದೆ ಇಡತಕ್ಕದ್ದು.

**18. ಸದ್ಭಾವನೆಯಿಂದ ಕೈಗೊಳ್ಳಲಾದ ಕ್ರಮದ ರಕ್ಷಣೆ.-** (1) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಅನುಸರಣೆಯಲ್ಲಿ, ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯಕ್ಕಾಗಿ ಯಾರೇ ವ್ಯಕ್ತಿಯ ವಿರುದ್ಧ ಯಾವುದೇ ದಾವೆ, ಪ್ರಾಸಿಕ್ಯೂಷನ್ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

(2) ಈ ಅಧಿನಿಯಮದ ಅಥವಾ ಅದರ ಮೇರೆಗೆ ಮಾಡಿದ ಯಾವುದೇ ಆದೇಶದ ಅನುಸರಣೆಯಲ್ಲಿ ಸದ್ಭಾವನೆಯಿಂದ ಮಾಡಿದ ಅಥವಾ ಮಾಡಬೇಕೆಂದು ಉದ್ದೇಶಿಸಿದ ಯಾವುದೇ ಕಾರ್ಯದಿಂದಾಗಿ ಉಂಟಾದ ಅಥವಾ ಉಂಟಾಗುವ ಸಂಭವವಿರುವ ಯಾವುದೇ ಹಾನಿಗೆ ಕೇಂದ್ರ ಸರ್ಕಾರದ ಅಥವಾ ಸಕ್ಷಮ ಪ್ರಾಧಿಕಾರದ ವಿರುದ್ಧ ಯಾವುದೇ ದಾವೆ ಅಥವಾ ಇತರ ಕಾನೂನು ವ್ಯವಹರಣೆಯು ಇರತಕ್ಕದ್ದಲ್ಲ.

**19. ಸಿವಿಲ್ ನ್ಯಾಯಾಲಯಗಳ ಅಧಿಕಾರ ವ್ಯಾಪ್ತಿಗೆ ಪ್ರತಿಷೇಧ.-** ಈ ಅಧಿನಿಯಮದಲ್ಲಿ ಅನ್ಯಥಾ ಸ್ಪಷ್ಟವಾಗಿ ಉಪಬಂಧಿಸಿರುವುದನ್ನುಳಿದು, ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಸಕ್ಷಮ ಪ್ರಾಧಿಕಾರವು ಅಥವಾ ಮಧ್ಯಸ್ಥಗಾರನು ನಿರ್ಧರಿಸಲು ಅಧಿಕಾರ ಇರುವ ಯಾವುದೇ ವಿಷಯಕ್ಕೆ ಸಂಬಂಧಪಟ್ಟಂತೆ ಯಾವುದೇ ಸಿವಿಲ್ ನ್ಯಾಯಾಲಯವೂ ಅಧಿಕಾರ ವ್ಯಾಪ್ತಿಯನ್ನು ಹೊಂದಿರತಕ್ಕದ್ದಲ್ಲ ಮತ್ತು ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರದ ಅನುಸರಣೆಯಲ್ಲಿ ಕೈಗೊಳ್ಳಲಾದ ಅಥವಾ

ಕೈಗೊಳ್ಳಬೇಕಾದ ಯಾವುದೇ ಕ್ರಮಕ್ಕೆ ಸಂಬಂಧಪಟ್ಟಂತೆ ಯಾವುದೇ ನ್ಯಾಯಾಲಯ ಅಥವಾ ಇತರ ಪ್ರಾಧಿಕಾರವು ಯಾವುದೇ ನಿರ್ಬಂಧಕಾಜ್ಞೆಯನ್ನು ನೀಡತಕ್ಕದ್ದಲ್ಲ.

**20. ಅಪರಾಧಗಳ ಬಗ್ಗೆ ದಂಡ.–** ಈ ಅಧಿನಿಯಮದ ಅಥವಾ ಅದರ ಮೇರೆಗೆ ರಚಿಸಲಾದ ಯಾವುದೇ ನಿಯಮದ ಉಪಬಂಧವನ್ನು ಅಥವಾ ಈ ಅಧಿನಿಯಮದ ಮೇರೆಗೆ ಮಾಡಿದ ಯಾವುದೇ ಆದೇಶವನ್ನು ಅಥವಾ ಕೊಟ್ಟ ನಿರ್ದೇಶನವನ್ನು ಉಲ್ಲಂಘಿಸುವ ಅಥವಾ ಈ ಅಧಿನಿಯಮದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಯಾವುದೇ ಅಧಿಕಾರವನ್ನು ಕಾನೂನುಬದ್ಧವಾಗಿ ಚಲಾಯಿಸುವುದಕ್ಕೆ ಅಡ್ಡಿಯನ್ನುಂಟು ಮಾಡುವ ಯಾರೇ ವ್ಯಕ್ತಿಯು, ಒಂದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದಂಥ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**21. ಕೆಲವು ವ್ಯಕ್ತಿಗಳು ಲೋಕನೌಕರರಾಗಿರತಕ್ಕದ್ದು.–** ಸಕ್ಷಮ ಪ್ರಾಧಿಕಾರವು, ಕೇಂದ್ರ ಸರ್ಕಾರದಿಂದ ಅಥವಾ ಸಕ್ಷಮ ಪ್ರಾಧಿಕಾರದಿಂದ ಅಧಿಕಾರ ಪಡೆದಿರುವ ಪ್ರತಿಯೊಬ್ಬ ಮಧ್ಯಸ್ಥಗಾರನು ಮತ್ತು ಪ್ರತಿಯೊಬ್ಬ ಅಧಿಕಾರಿಯು ಈ ಅಧಿನಿಯಮದ ಮೇರೆಗೆ ಯಾವುದೇ ಅಧಿಕಾರವನ್ನು ಚಲಾಯಿಸುವಾಗ ಅಥವಾ ಯಾವುದೇ ಕರ್ತವ್ಯವನ್ನು ನೆರವೇರಿಸುವಾಗ, ಅವರನ್ನು ಭಾರತ ದಂಡ ಸಂಹಿತೆಯ (1860ರ 45) 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಲೋಕನೌಕರರಾಗಿರುವರೆಂದು ಭಾವಿಸತಕ್ಕದ್ದು.

**22. ನಿಯಮ ರಚನಾಧಿಕಾರ.–** (1) ಕೇಂದ್ರ ಸರ್ಕಾರವು, ರಾಜಪತ್ರದಲ್ಲಿ ಅಧಿಸೂಚನೆಯ ಮೂಲಕ, ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ರಚಿಸಬಹುದು.

(2) ವಿಶೇಷವಾಗಿ ಮತ್ತು ಹಿಂದೆ ಹೇಳಲಾದ ಅಧಿಕಾರದ ಸಾಮಾನ್ಯತೆಗೆ ಬಾಧಕವಾಗದಂತೆ, ಅಂಥ ನಿಯಮಗಳು ಈ ಮುಂದಿನ ಎಲ್ಲಾ ಅಥವಾ ಯಾವುವೇ ವಿಷಯಗಳ ಬಗ್ಗೆ ಉಪಬಂಧ ಕಲ್ಪಿಸಬಹುದು, ಎಂದರೆ,–

(ಎ) 3ನೇ ಪ್ರಕರಣದ ಅಥವಾ 6ನೇ ಪ್ರಕರಣದ ಮೇರೆಗೆ ವಿಚಾರಣೆಗಳನ್ನು ಮಾಡುವಾಗ ಸಕ್ಷಮ ಪ್ರಾಧಿಕಾರವು ಅನುಸರಿಸಬೇಕಾದ ಕಾರ್ಯವಿಧಾನ;

(ಬಿ) ಈ ಅಧಿನಿಯಮದ ಮೇರೆಗೆ ಮಧ್ಯಸ್ಥಗಾರಿಕೆ ವ್ಯವಹರಣೆಗಳಲ್ಲಿ ಮತ್ತು ಅಪೀಲುಗಳಲ್ಲಿ ಅನುಸರಿಸಬೇಕಾದ ಕಾರ್ಯವಿಧಾನ;

(ಸಿ) ಪರಿಹಾರದ ಮೊಬಲಗನ್ನು ನಿರ್ಧರಿಸುವಲ್ಲಿ ಅನುಸರಿಸಬೇಕಾದ ಸೂತ್ರಗಳು ಮತ್ತು ಅಂಥ ಪರಿಹಾರವನ್ನು ಸಂದಾಯ ಮಾಡುವ ವಿಧಾನ;

(ಡಿ) ಮಧ್ಯಸ್ಥಗಾರನ ಮುಂದಿರುವ ವ್ಯವಹರಣೆಗಳ ಖರ್ಚನ್ನು ಭಾಗ ಮಾಡುವಲ್ಲಿ ಮತ್ತು ಈ ಅಧಿನಿಯಮದ ಮೇರೆಗಿನ ಅಪೀಲಿನ ಬಗ್ಗೆ ಅನುಸರಿಸಬೇಕಾದ ಸೂತ್ರಗಳು;

(ಇ) ನೋಟೀಸುಗಳನ್ನು ಮತ್ತು ಆದೇಶಗಳನ್ನು ಜಾರಿಮಾಡುವ ರೀತಿ;

(ಎಫ್) ನಿಯಮಿಸಬೇಕಾದ ಅಥವಾ ನಿಯಮಿಸಬಹುದಾದ ಇತರ ಯಾವುದೇ ವಿಷಯ.

(3) ಈ ಅಧಿನಿಯಮದ ಮೇರೆಗೆ ರಚಿಸಿದ ಪ್ರತಿಯೊಂದು ನಿಯಮವನ್ನು ಅದನ್ನು ರಚಿಸಿದ ತರುವಾಯ ಆದಷ್ಟು ಬೇಗನೆ, ಸಂಸತ್ತಿನ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ, ಒಂದು ಅಧಿವೇಶನದಲ್ಲಿ ಅಥವಾ ನಿರಂತರವಾಗಿ ಬರುವ ಎರಡು ಅಥವಾ ಅದಕ್ಕಿಂತ ಹೆಚ್ಚಿನ ಅಧಿವೇಶನಗಳಲ್ಲಿ ಅಡಕವಾಗಬಹುದಾದಂಥ ಒಟ್ಟು ಮೂವತ್ತು

ದಿವಸಗಳ ಅವಧಿಯವರೆಗೆ ಇಡತಕ್ಕದ್ದು ಮತ್ತು ಹಿಂದೆ ಹೇಳಿದ ಅಧಿವೇಶನದ ಅಥವಾ ನಿರಂತರವಾಗಿ ಬರುವ ಅಧಿವೇಶನಗಳ ನಿಕಟೋತ್ತರದ ಅಧಿವೇಶನದ ಮುಕ್ತಾಯಕ್ಕೆ ಮುಂಚೆ ಆ ನಿಯಮದಲ್ಲಿ ಯಾವುದೇ ಮಾರ್ಪಾಡನ್ನು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಆ ನಿಯಮವನ್ನು ಮಾಡಕೂಡದೆಂದು ಎರಡೂ ಸದನಗಳು ಒಪ್ಪಿದರೆ, ಆ ತರುವಾಯ ಆ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗತಕ್ಕದ್ದು ಅಥವಾ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ, ಯಾವುದೇ ಅಂಥ ಮಾರ್ಪಾಟು ಅಥವಾ ರದ್ದಿಯಾತಿಯು ಆ ನಿಯಮದ ಮೇರೆಗೆ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವನ್ನುಂಟು ಮಾಡತಕ್ಕದ್ದಲ್ಲ.

**23. ಕೆಲವು ಕಡ್ಡಾಯ ಕೋರಿಕೆಗಳ ಮತ್ತು ಆರ್ಜನೆಗಳ ಸಿಂಧುತ್ವ.-** (1) ಯಾವುದೇ ಪ್ರಾಂತೀಯ ಅಥವಾ ರಾಜ್ಯ ಅಧಿನಿಯಮದ ಮೇರೆಗೆ, ಒಕ್ಕೂಟದ ಉದ್ದೇಶವಾಗಿರುವಂಥ ಯಾವುದೇ ಸಾರ್ವಜನಿಕ ಉದ್ದೇಶದ ಬಗ್ಗೆ ರಾಜ್ಯ ಸರ್ಕಾರವು ಕಡ್ಡಾಯವಾಗಿ ಕೋರಬೇಕೆಂದು ಉದ್ದೇಶಿಸಿದ ಮತ್ತು 1952ನೇ ಜನವರಿ 25ರ ನಿಕಟಪೂರ್ವದಲ್ಲಿ ಕೇಂದ್ರ ಸರ್ಕಾರವು ಅಥವಾ ಆ ಸರ್ಕಾರಕ್ಕೆ ಅಧೀನನಾದ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು ಉಪಯೋಗಿಸಿದ ಅಥವಾ ವಶಪಡಿಸಿಕೊಂಡಿದ್ದ ಎಲ್ಲಾ ಸ್ಥಿರ ಸ್ವತ್ತನ್ನು, ಆ ದಿನಾಂಕದಿಂದ ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಯುಕ್ತವಾಗಿ ಕಡ್ಡಾಯವಾಗಿ ಕೋರಲಾದ ಸ್ವತ್ತೆಂದು ಭಾವಿಸತಕ್ಕದ್ದು ಮತ್ತು ಯಾವುದೇ ನ್ಯಾಯಾಲಯದ ಯಾವುದೇ ತೀರ್ಪು, ಡಿಕ್ರಿ ಅಥವಾ ಆದೇಶವಿದ್ದಾಗ್ಯೂ, ಅಂಥ ಪ್ರತಿಯೊಂದು ಕಡ್ಡಾಯ ಕೋರಿಕೆಯು, ಕಡ್ಡಾಯ ಕೋರಿಕೆಯ ದಿನಾಂಕದಂದು ಮತ್ತು ಆ ದಿನಾಂಕದಿಂದ ಈ ಅಧಿನಿಯಮವು ಜಾರಿಯಲ್ಲಿದ್ದಿದ್ದರೆ ಮತ್ತು ಕಡ್ಡಾಯ ಕೋರಿಕೆಯನ್ನು ಈ ಅಧಿನಿಯಮದ ಮೇರೆಗೆ ಸಕ್ಷಮ ಪ್ರಾಧಿಕಾರವು ಯುಕ್ತವಾಗಿ ಮಾಡಿದ್ದಿದ್ದರೆ ಹೇಗೋ ಹಾಗೆ, ಯಾವಾಗಲೂ ಸಿಂಧುವಾಗಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲಾ ಉಪಬಂಧಗಳೂ ತದನುಸಾರವಾಗಿ ಅನ್ವಯವಾಗತಕ್ಕದ್ದು:

ಪರಂತು, 1952ರ ಜನವರಿ 25ನೆಯ ದಿನಕ್ಕೆ ಮುಂಚೆ ಮತ್ತು ಆ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗಾಗಿ, ಅಂಥ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರ ಸಂದಾಯಕ್ಕಾಗಿನ ಎಲ್ಲ ಒಪ್ಪಂದಗಳು ಮತ್ತು ಐತೀರ್ಪುಗಳು ಸಿಂಧುವಾಗತಕ್ಕದ್ದು ಮತ್ತು ಅದು ಯಾವಾಗಲೂ ಸಿಂಧುವಾಗಿತ್ತೆಂದು ಭಾವಿಸತಕ್ಕದ್ದು ಮತ್ತು ಅದು ಜಾರಿಯಲ್ಲಿ ಮುಂದುವರಿಯತಕ್ಕದ್ದು ಮತ್ತು ಆ ದಿನಾಂಕದ ತರುವಾಯದ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗಾಗಿ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರ ಸಂದಾಯಕ್ಕೆ ಅನ್ವಯವಾಗತಕ್ಕದ್ದು.

(2) ಒಕ್ಕೂಟದ ಉದ್ದೇಶವಾಗಿರುವಂಥ ಯಾವುದೇ ಸಾರ್ವಜನಿಕ ಉದ್ದೇಶಕ್ಕಾಗಿ ರಾಜ್ಯ ಸರ್ಕಾರವು, ಆ ರಾಜ್ಯದಲ್ಲಿ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾಯಿದೆಯ ಮೇರೆಗೆ, ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಬೇಕೆಂದು ಉದ್ದೇಶಿಸಿದ ಮತ್ತು ಅಂಥ ಪ್ರಾರಂಭದ ನಿಕಟಪೂರ್ವದ ಮೊದಲು ಕೇಂದ್ರ ಸರ್ಕಾರವು ಅಥವಾ ಕೇಂದ್ರ ಸರ್ಕಾರದ ಅಧಿಕಾರಿಯು ಅಥವಾ ಅದರ ಅಧೀನ ಪ್ರಾಧಿಕಾರವು ಉಪಯೋಗಿಸಿದ ಅಥವಾ ವಶಪಡಿಸಿಕೊಂಡಿದ್ದ ಸ್ಥಿರ ಸ್ವತ್ತಿನ ಪ್ರತಿಯೊಂದು ಆರ್ಜನೆಯನ್ನೂ, ಯಾವ ಕಾಯಿದೆಯ ಅಥವಾ ಆದೇಶದ ಮೇರೆಗೆ ಆರ್ಜಿಸಲಾಗಿದೆಯೋ ಆ ಕಾಯಿದೆ ಅಥವಾ ಆದೇಶದಲ್ಲಿ ಯಾವುದೇ ದೋಷವಿದ್ದಾಗ್ಯೂ ಅಥವಾ ಅದಕ್ಕೆ ಸಿಂಧುತ್ವ ಇಲ್ಲದಿದ್ದಾಗ್ಯೂ, ಸದರಿ ಕಾಯಿದೆಯ ಅಥವಾ ಆದೇಶದ ಉಪಬಂಧಗಳು ಈ ಪ್ರಕರಣದಲ್ಲಿ ಸೇರಿಸಲಾಗಿದ್ದರೆ ಮತ್ತು ಅವುಗಳನ್ನು ಅಧಿನಿಯಮಿತಗೊಳಿಸಿದ್ದರೆ ಮತ್ತು ಈ ಪ್ರಕರಣವು ಆರ್ಜನೆಯ ದಿನಾಂಕದಂದು ಮತ್ತು

ಅಂದಿನಿಂದ ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ ಎಲ್ಲ ಉದ್ದೇಶಗಳಿಗಾಗಿ ಸಿಂಧುವಾಗಿದೆಯೆಂದು ಭಾವಿಸತಕ್ಕದ್ದು.

**24. ನಿರಸನ ಮತ್ತು ಉಳಿಸುವಿಕೆ.-** (1) ಕಡ್ಡಾಯವಾಗಿ ಕೋರಲಾದ ಭೂಮಿಯ (ಅಧಿಕಾರಗಳ ಮುಂದುವರಿಕೆ) ಅಧಿನಿಯಮ, 1947 (1947ರ 17), ದೆಹಲಿ ಆವರಣಗಳ (ಕಡ್ಡಾಯ ಕೋರಿಕೆ ಮತ್ತು ಹೊರದೂಡುವಿಕೆ) ಅಧಿನಿಯಮ, 1947 (1947ರ 49) ಮತ್ತು ಸ್ಥಿರ ಸ್ವತ್ತುಗಳ ಕಡ್ಡಾಯ ಕೋರಿಕೆ ಮತ್ತು ಆರ್ಜನೆ ಅಧ್ಯಾದೇಶ, 1952 (1952ರ 3) - ಇವು ಈ ಮೂಲಕ ನಿರಸಿತವಾಗಿವೆ.

(2) ಸಂದೇಹಗಳ ನಿವಾರಣೆಗಾಗಿ, ಸದರಿ ಯಾವುವೇ ಅಧಿನಿಯಮಗಳ ಅಥವಾ ಸದರಿ ಅಧ್ಯಾದೇಶದ ಉಪಬಂಧಗಳ ಮೇರೆಗೆ ಅಂಥ ನಿರಸನಕ್ಕೆ ನಿಕಟಪೂರ್ವದಲ್ಲಿ ಕಡ್ಡಾಯ ಕೋರಿಕೆಗೆ ಒಳಪಟ್ಟಿರುವ ಯಾವುದೇ ಸ್ವತ್ತನ್ನು, ಈ ಅಧಿನಿಯಮದ ಪ್ರಾರಂಭದಂದು ಈ ಅಧಿನಿಯಮದ 3ನೇ ಪ್ರಕರಣದ ಮೇರೆಗೆ ಕಡ್ಡಾಯವಾಗಿ ಕೋರಲಾದ ಸ್ವತ್ತೆಂದು ಭಾವಿಸತಕ್ಕದ್ದೆಂದು ಈ ಮೂಲಕ ಘೋಷಿಸಲಾಗಿದೆ ಮತ್ತು ಈ ಅಧಿನಿಯಮದ ಎಲ್ಲ ಉಪಬಂಧಗಳೂ ತದನುಸಾರವಾಗಿ ಅನ್ವಯವಾಗತಕ್ಕದ್ದು:

ಪರಂತು,-

(ಎ) ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮತ್ತು ಅಂಥ ಪ್ರಾರಂಭದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗಾಗಿ, ಅಂಥ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರದ ಸಂದಾಯಕ್ಕಾಗಿನ ಎಲ್ಲ ಒಪ್ಪಂದಗಳು ಮತ್ತು ಐತೀರ್ಪುಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಅಂಥ ಪ್ರಾರಂಭದ ತರುವಾಯ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗೆ ಆ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರದ ಸಂದಾಯಕ್ಕೆ ಅನ್ವಯವಾಗತಕ್ಕದ್ದು;

(ಬಿ) ಸದರಿ ಅಧಿನಿಯಮಗಳ ಅಥವಾ ಸದರಿ ಅಧ್ಯಾದೇಶದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಾಗ (ಹೊರಡಿಸಿದ ಯಾವುವೇ ಆದೇಶಗಳು, ಅಧಿಸೂಚನೆಗಳು ಅಥವಾ ರಚಿಸಿದ ನಿಯಮಗಳನ್ನೊಳಗೊಂಡು) ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು ಈ ಅಧಿನಿಯಮದ ಉಪಬಂಧಗಳಿಗೆ ಅವು ಅಸಂಗತವಾಗದೆ ಇರುವಷ್ಟರಮಟ್ಟಿಗೆ, ಅಂಥ ಕಾರ್ಯವನ್ನು ಮಾಡಿದ ಅಥವಾ ಅಂಥ ಕ್ರಮವನ್ನು ಕೈಗೊಂಡ ದಿನದಂದು ಈ ಅಧಿನಿಯಮವು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ, ಈ ಅಧಿನಿಯಮದಿಂದ ಅಥವಾ ಅದರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸುವಾಗ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

**25. ಅಧಿನಿಯಮದ ಮೇರೆಗೆ ಕೆಲವು ಕಡ್ಡಾಯ ಕೋರಿಕೆಗಳಿಗೆ ಸಂಬಂಧಿಸಿದಂತೆ ವಿಶೇಷ ಉಪಬಂಧ.-** (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಅಥವಾ ಭಾರತ ರಕ್ಷಣಾ ಅಧಿನಿಯಮ, 1962 (1962ರ 51) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಆ ಸರ್ಕಾರವು ಈ ಸಂಬಂಧದಲ್ಲಿ ಯಾರಿಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆಯೋ ಅಂಥ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು (ಸದರಿ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾಗಿದೆಯೆಂದು ಭಾವಿಸಲಾದ ಯಾವುದೇ ಸ್ಥಿರಸ್ವತ್ತು ಒಳಗೊಂಡಂತೆ) ಕಡ್ಡಾಯವಾಗಿ ಕೋರಲಾದ, ಆದರೆ 1968ರ ಜನವರಿ 10 ಕ್ಕಿಂತ ಮುಂಚಿತವಾಗಿ ಅಂಥ

ಕಡ್ಡಾಯ ಕೋರಿಕೆಯಿಂದ ಬಿಡುಗಡೆಗೊಳಿಸಿರದ ಯಾವುದೇ ಸ್ಥಿರ ಸ್ವತ್ತನ್ನು ಆ ದಿನಾಂಕದಿಂದ, ಸದರಿ ದಿನಾಂಕದ ನಿಕಟಪೂರ್ವದಲ್ಲಿ ಅಂಥ ಸ್ವತ್ತನ್ನು ಧಾರಣ ಮಾಡಿದ್ದ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಕ್ಷಮ ಪ್ರಾಧಿಕಾರವು ಕಡ್ಡಾಯವಾಗಿ ಕೋರಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು:

ಪರಂತು,-

(ಎ) ಸದರಿ ದಿನಾಂಕಕ್ಕೆ ಮುಂಚೆ ಮತ್ತು ಸದರಿ ದಿನಾಂಕದ ನಿಕಟಪೂರ್ವದಲ್ಲಿ ಜಾರಿಯಲ್ಲಿದ್ದ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗೆ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರದ ಸಂದಾಯಕ್ಕಾಗಿನ ಎಲ್ಲ ನಿರ್ಧಾರಗಳು, ಒಪ್ಪಂದಗಳು ಮತ್ತು ಐತೀರ್ಪುಗಳು ಜಾರಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಆ ಸ್ವತ್ತಿಗೆ ಸಂಬಂಧಪಟ್ಟಂತೆ ಸದರಿ ದಿನಾಂಕದಿಂದ ಕಡ್ಡಾಯ ಕೋರಿಕೆಯ ಯಾವುದೇ ಅವಧಿಗೆ ಪರಿಹಾರ ಸಂದಾಯ ಮಾಡುವುದಕ್ಕೆ ಅನ್ವಯವಾಗತಕ್ಕದ್ದು;

(ಬಿ) ಕೇಂದ್ರ ಸರ್ಕಾರವು ಅಥವಾ ಭಾರತ ರಕ್ಷಣಾ ಅಧಿನಿಯಮ, 1962 (1962ರ 51)ರ VIನೇ ಅಧ್ಯಾಯದ ಮೂಲಕ ಅಥವಾ ಅದರ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಆ ಸರ್ಕಾರವು ಈ ಸಂಬಂಧದಲ್ಲಿ ಯಾರಿಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆಯೋ ಅಂಥ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು ಮಾಡಿದ ಯಾವುದೇ ಕಾರ್ಯವನ್ನು ಅಥವಾ ಕೈಗೊಂಡ ಯಾವುದೇ ಕ್ರಮವನ್ನು (ಹೊರಡಿಸಿದ ಯಾವುವೇ ಆದೇಶಗಳು, ಅಧಿಸೂಚನೆಗಳು ಅಥವಾ ರಚಿಸಿದ ನಿಯಮಗಳನ್ನೊಳಗೊಂಡಂತೆ) ಈ ಅಧಿನಿಯಮದ ಉಪಬಂಧಗಳಿಗೆ ಅದು ಅಸಂಗತವಾಗದೆ ಇರುವಷ್ಟರಮಟ್ಟಿಗೆ, ಅಂಥ ಕಾರ್ಯವನ್ನು ಮಾಡಿದ ಅಥವಾ ಕ್ರಮವನ್ನು ಕೈಗೊಂಡ ದಿನಾಂಕದಂದು ಈ ಪ್ರಕರಣವು ಜಾರಿಯಲ್ಲಿದ್ದಿದ್ದರೆ ಹೇಗೋ ಹಾಗೆ, ಈ ಅಧಿನಿಯಮದ ಮೂಲಕ ಅಥವಾ ಮೇರೆಗೆ ಪ್ರದತ್ತವಾದ ಅಧಿಕಾರಗಳನ್ನು ಚಲಾಯಿಸಿ ಮಾಡಲಾಗಿದೆಯೆಂದು ಅಥವಾ ಕೈಗೊಳ್ಳಲಾಗಿದೆಯೆಂದು ಭಾವಿಸತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಭಾರತ ರಕ್ಷಣಾ ಅಧಿನಿಯಮ, 1962 (1962ರ 51)ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, ಉಪಬಂಧಗಳು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೇ ಅಂಥ ಸ್ಥಿರಸ್ವತ್ತಿನ ಕಡ್ಡಾಯ ಕೋರಿಕೆಗೆ ಆ ಉಪಬಂಧಗಳು ಸಂಬಂಧಿಸಿರುವಷ್ಟರಮಟ್ಟಿಗೆ, 1968ರ ಜನವರಿ, 10 ರಿಂದ ಚಾಲ್ತಿಯಲ್ಲಿರುವುದು ನಿಂತುಹೋಗತಕ್ಕದ್ದು. ಆದಾಗ್ಯೂ, ಹಾಗೆ ನಿಂತುಹೋಗುವುದಕ್ಕೂ ಮುಂಚೆ ಮಾಡಿದ ಅಥವಾ ಮಾಡಲು ತಪ್ಪಿದ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಾತ್ರ ಅವು ಚಾಲ್ತಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಹಾಗೆ ಚಾಲ್ತಿಯಲ್ಲಿರುವುದು ನಿಂತುಹೋದ ಮೇಲೆ ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣವು, ಕೇಂದ್ರ ಅಧಿನಿಯಮದ ಮೂಲಕ ಒಂದು ಅಧಿನಿಯಮಿತಿಯು ನಿರಸನಗೊಂಡಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**26. 1971ರ 42ನೇ ಅಧಿನಿಯಮದ ಮೇರೆಗೆ ಕೆಲವು ಕಡ್ಡಾಯ ಕೋರಿಕೆಗಳಿಗೆ ವಿಶೇಷ ಉಪಬಂಧ.**- (1) ಈ ಅಧಿನಿಯಮದಲ್ಲಿ ಏನೇ ಇದ್ದರೂ, ಕೇಂದ್ರ ಸರ್ಕಾರವು ಅಥವಾ ಭಾರತ

ರಕ್ಷಣಾ ಅಧಿನಿಯಮ, 1971 (1971ರ 42) ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ (ಸದರಿ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾಗಿದೆಯೆಂದು ಭಾವಿಸಲಾದ ಯಾವುದೇ ಸ್ಥಿರ ಸ್ವತ್ತನ್ನು ಒಳಗೊಂಡಂತೆ) ಆ ಸರ್ಕಾರವು ಈ ಸಂಬಂಧದಲ್ಲಿ ಯಾರಿಗೆ ಅಧಿಕಾರಗಳನ್ನು ಪ್ರತ್ಯಾಯೋಜಿಸಿದೆಯೋ ಅಂಥ ಯಾರೇ ಅಧಿಕಾರಿಯು ಅಥವಾ ಪ್ರಾಧಿಕಾರವು ಕಡ್ಡಾಯವಾಗಿ ಕೋರಿರುವ ಅಥವಾ ಕಡ್ಡಾಯವಾಗಿ ಕೋರಲಾಗಿದೆಯೆಂದು ತಾತ್ಪರ್ಯವಾಗುವ ಯಾವುದೇ ಸ್ಥಿರ ಸ್ವತ್ತನ್ನು ಗೊತ್ತುಪಡಿಸಿದ ದಿನಾಂಕಕ್ಕೆ ಮುಂಚೆ ಅಂಥ ಕಡ್ಡಾಯ ಕೋರಿಕೆಯಿಂದ ಬಿಡುಗಡೆಗೊಳಿಸದಿರುವಲ್ಲಿ,-

(i) ಅಂಥ ಸ್ವತ್ತನ್ನು, ಆ ದಿನಾಂಕದಿಂದ 1977ರ ಮಾರ್ಚ್, 21 ರಂದು ಅಥವಾ ಅದಕ್ಕೂ ಮುಂಚೆ ಕಡ್ಡಾಯವಾಗಿ ಕೋರಲಾಗಿದ್ದರೆ; ಮತ್ತು

(ii) ಅಂಥ ಸ್ವತ್ತನ್ನು ಅದರ ಕಡ್ಡಾಯ ಕೋರಿಕೆಯ ದಿನಾಂಕದಿಂದ, ಅಂಥ ದಿನಾಂಕದ ನಂತರ ಯಾವುದೇ ಕಾಲದಲ್ಲಿ ಕಡ್ಡಾಯವಾಗಿ ಕೋರಲಾಗಿದ್ದರೆ

– ಅಂಥ ಸ್ವತ್ತನ್ನು ಗೊತ್ತುಪಡಿಸಿದ ದಿನದ ನಿಕಟಪೂರ್ವದಲ್ಲಿ ಯಾವ ಉದ್ದೇಶಕ್ಕಾಗಿ ಧಾರಣ ಮಾಡಲಾಗಿತ್ತೋ ಆ ಉದ್ದೇಶಕ್ಕಾಗಿ ಈ ಅಧಿನಿಯಮದ ಉಪಬಂಧಗಳ ಮೇರೆಗೆ ಸಕ್ಷಮ ಪ್ರಾಧಿಕಾರವು ಕಡ್ಡಾಯವಾಗಿ ಕೋರಿದೆಯೆಂದು ಭಾವಿಸತಕ್ಕದ್ದು ಮತ್ತು ಈ ಅಧಿನಿಯಮದ ಎಲ್ಲ ಉಪಬಂಧಗಳು ತದನುಸಾರವಾಗಿ ಅನ್ವಯವಾಗತಕ್ಕದ್ದು:

ಪರಂತು, ಈ ಅಧಿನಿಯಮದ ಮೇರೆಗೆ ಕಡ್ಡಾಯವಾಗಿ ಕೋರಲಾಗಿದೆಯೆಂದು ಭಾವಿಸಲಾದ ಯಾವುದೇ ಸ್ವತ್ತಿಗೆ ಸಂಬಂಧಪಟ್ಟಂತೆ ಈ ಅಧಿನಿಯಮದ ಮೇರೆಗೆ ಸಂದಾಯ ಮಾಡಬೇಕಾಗುವ ಪರಿಹಾರವನ್ನು ನಿರ್ಧರಿಸುವಲ್ಲಿ, 8ನೇ ಪ್ರಕರಣದ (2)ನೇ ಉಪಪ್ರಕರಣದ (ಬಿ) ಖಂಡದಲ್ಲಿ ನಿರ್ದಿಷ್ಟಪಡಿಸಿರುವ ಎಲ್ಲ ಅಥವಾ ಯಾವುವೇ ವಿಷಯಗಳ ಬಗ್ಗೆ ಹಿತಾಸಕ್ತಿಯುಳ್ಳ ವ್ಯಕ್ತಿಯ ನಷ್ಟ ಸರಿದೂಗಿಸುವುದಕ್ಕೆ ಅವಶ್ಯಕವೆಂದು ಕಂಡುಬರಬಹುದಾದ ಯಾವುದೇ ಮೊತ್ತ ಅಥವಾ ಮೊತ್ತಗಳು ಯಾವುವಾದರೂ ಇದ್ದರೆ, ಅದನ್ನು ಅಥವಾ ಅವುಗಳನ್ನು ಭಾರತ ರಕ್ಷಣಾ ಅಧಿನಿಯಮ, 1971 (1971ರ 42)ರ ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳ ಮೇರೆಗೆ ಅಂಥ ಸ್ವತ್ತಿಗೆ ಸಂಬಂಧಪಟ್ಟಂತೆ ಪರಿಹಾರವಾಗಿ ಅಂಥ ವಿಷಯದ ಅಥವಾ ವಿಷಯಗಳ ಸಂಬಂಧ ಸಂದಾಯ ಮಾಡಿದ ಅಥವಾ ಸಂದಾಯ ಮಾಡಬಹುದಾದ ಯಾವುದೇ ಮೊತ್ತ ಅಥವಾ ಮೊತ್ತಗಳಿಂದ ಕಡಿಮೆ ಮಾಡತಕ್ಕದ್ದು.

(2) (1)ನೇ ಉಪಪ್ರಕರಣದಲ್ಲಿ ಅನ್ಯಥಾ ಉಪಬಂಧಿಸಿರುವುದನ್ನುಳಿದು, ಭಾರತ ರಕ್ಷಣಾ ಅಧಿನಿಯಮ, 1971 (1971ರ 42)ರ ಉಪಬಂಧಗಳು ಮತ್ತು ಅದರ ಮೇರೆಗೆ ರಚಿಸಿದ ನಿಯಮಗಳು, (1)ನೇ ಉಪಪ್ರಕರಣದಲ್ಲಿ ಉಲ್ಲೇಖಿಸಿದಂಥ ಯಾವುದೇ ಅಂಥ ಸ್ಥಿರ ಸ್ವತ್ತಿನ ಕಡ್ಡಾಯ ಕೋರಿಕೆಗೆ ಅಂಥ ಉಪಬಂಧಗಳು ಸಂಬಂಧಿಸಿರುವಷ್ಟರಮಟ್ಟಿಗೆ, ಅವು 1977ರ ಮಾರ್ಚ್, 21 ರಿಂದ ಚಾಲ್ತಿಯಲ್ಲಿರುವುದು ನಿಂತುಹೋಗತಕ್ಕದ್ದು. ಆದಾಗ್ಯೂ, ಹಾಗೆ ನಿಂತುಹೋಗುವುದಕ್ಕೂ ಮುಂಚೆ ಮಾಡಿದ ಅಥವಾ ಮಾಡಲು ತಪ್ಪಿದ ಕಾರ್ಯಗಳಿಗೆ ಸಂಬಂಧಪಟ್ಟಂತೆ ಮಾತ್ರ ಚಾಲ್ತಿಯಲ್ಲಿರುವುದು ಮುಂದುವರಿಯತಕ್ಕದ್ದು ಮತ್ತು ಸಾಮಾನ್ಯ ಖಂಡಗಳ ಅಧಿನಿಯಮ, 1897 (1897ರ 10)ರ 6ನೇ ಪ್ರಕರಣವು, ಅವು ಹಾಗೆ ಚಾಲ್ತಿಯಲ್ಲಿರುವುದು ನಿಂತುಹೋದ ಮೇಲೆ, ಹಾಗೆ ನಿಂತುಹೋಗಿರುವುದು, ಕೇಂದ್ರ ಅಧಿನಿಯಮದ ಮೂಲಕ ಒಂದು ಅಧಿನಿಯಮಿತಿಯು ನಿರಸಿತವಾಗಿದ್ದರೆ ಹೇಗೋ ಹಾಗೆ ಅನ್ವಯವಾಗತಕ್ಕದ್ದು.

**ವಿವರಣೆ:-** ಈ ಪ್ರಕರಣದಲ್ಲಿ "ಗೊತ್ತುಪಡಿಸಿದ ದಿನ" ಎಂದರೆ 1977ರ ಸೆಪ್ಟೆಂಬರ್ 23.

*          *          *